# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE    Vol XVI 7    ಜುಲೈ 1996

### ಈ ಸಂಚಿಕೆಯಲ್ಲಿ

| | | |
|---|---|---|
| ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರ ಭೇಟಿ | • ರಮಾ ಕೃಷ್ಣಸ್ವಾಮಿ | 2 |
| ಮುಂಬಯಿ ಅಸೋಸಿಯೇಷನ್ ಒಂದು ಸವಿ ನೆನಪು | • ಟಿ. ಆರ್. ಎಸ್. ಆನಂದ | 3 |
| ಬಲಿ | • ಸ. ಬಿ. ಕು. | 4 |
| ಭಾರತ ಸಿಂಧು ರಶ್ಮಿ ಮತ್ತು ಸಮಕಾಲೀನತೆ | • ಜಿ. ಎನ್. ಉಪಾಧ್ಯ | 6 |
| ಮಿಸ್ ಕರ್ನಾಟಕ ಸ್ಪರ್ಧೆಯ ಸಂಯೋಜಕಿ ಹಾಗೂ ವಿಜೇತರೊಡನೆ ಮಾತುಕತೆ | • ರೇಖಾ | 8 |
| ದೇಹದ ಸ್ಥಿರ ಉಷ್ಣತೆ | • ಎಂ. ಆರ್. ನಾಗರಾಜು | 11 |
| ಕರ್ಮಬಂಧದಿಂದ ಬಿಡುಗಡೆ | (ಸಂಗ್ರಹ) | 12 |
| ಕವನ: ನೀನು ಬರಲಿಲ್ಲ | • ಅಮೃತಾ ಪ್ರೀತಮ್ (ಅನು: ಹಾ. ಮಾ. ನಾಯಕ್) | 13 |
| ಸಂಮೋಹಿನಿ ಚಿಕಿತ್ಸೆ | • ಡಾ\| ಉಷಾ | 14 |
| ಅಲ್ಪನಿಗೆ ಐಶ್ವರ್ಯ ಬಂದರೇ ! | • ರಮಾ ಕೃಷ್ಣಸ್ವಾಮಿ | 15 |
| ಸುತ್ತ ಮುತ್ತ | | 16 |

**The Mysore Association, Bombay**
393, Bhaudaji Road, Matunga, Bombay 400 019.
[redacted]
Tel.: 402 46 47 Grams: "KARUNADU"

# ಕರ್ನಾಟಕದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರ ಭೇಟಿ



*ಶ್ರೀ ಮುದ್ದು ಕೃಷ್ಣ, ಅವರಿಗೆ ಶ್ರೀಮತಿ ಲೀಲಾ ರಾಜ್ ಕುಮಾರ್ ಅವರು ಪುಷ್ಪಗುಚ್ಛ ಕೊಡುತ್ತಿರುವುದು.*

ಕರ್ನಾಟಕದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಜನ ಇಲಾಖೆಗಳ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮುದ್ದುಕೃಷ್ಣ ಅವರು ಜೂನ್ ತಿಂಗಳ 13ನೇ ತಾ. ಗುರುವಾರದಂದು ಮುಂಬೈಗೆ ಭೇಟಿ ನೀಡಿದ ಸಂದರ್ಭದಲ್ಲಿ ಮುಂಬೈಯ ಮೈಸೂರು ಅಸೋಸಿಯೇಶನ್. ಒಂದು ಸತ್ಕಾರ ಕೂಟವನ್ನೇರ್ಪಡಿಸಿತ್ತು. ಈ ಸತ್ಕಾರ ಕೂಟದಲ್ಲಿ ಮುಂಬೈಯ ಕನ್ನಡ ಸಂಘ ಸಂಸ್ಥೆಗಳು ಪಾಲ್ಗೊಂಡು ಅತಿಥಿಗಳನ್ನು ಅಭಿನಂದಿಸಿದರು.

ಬೃಹನ್ಮುಂಬೈನಲ್ಲಿರುವ ಕನ್ನಡಿಗರು ತಮ್ಮ ನಾಡು ನುಡಿಯಿಂದ ದೂರದಲ್ಲಿದ್ದು ಕೊಂಡು, ಕನ್ನಡದ ಹಾಗೂ ಕರ್ನಾಟಕದ ಸಂಸ್ಕೃತಿಯ ಉಳಿವಿಗಾಗಿ ನಾನಾ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ತಮ್ಮದೇ ಆದ ನಾನಾ ಚಟುವಟಿಕೆಗಳನ್ನು ನಡೆಸಿ ಕೊಂಡು ಬರುತ್ತಿದ್ದಾರೆ. ಇದರಲ್ಲಿ ಅನೇಕ ದಶಕಗಳಿಂದಲೂ ಕೆಲಸ ಮಾಡುತ್ತಿರುವ ಸಂಸ್ಥೆಗಳಿದ್ದು, ವಜ್ರ ಮಹೋತ್ಸವ, ಸುವರ್ಣ ಮಹೋತ್ಸವ, ರಜತ ಮಹೋತ್ಸವವನ್ನೂ ಆಚರಿಸಿವೆ.

ಈ ಸಂದರ್ಭದಲ್ಲಿ ಬಹುಷಃ ಎಲ್ಲಾ ಸಂಸ್ಥೆಗಳ ಪ್ರತಿನಿಧಿಗಳೂ ಹಾಜರಿದ್ದು ತಮ್ಮ ತಮ್ಮ ಕಾರ್ಯ ಚಟುವಟಿಕೆಗಳನ್ನು ನಿರ್ದೇಶಕರ ಮುಂದಿಟ್ಟರು. ಇದರಲ್ಲಿ ಕೆಲ ಸಂಸ್ಥೆಗಳು ತಿಂಗಳೋಲೆಗಳನ್ನು ಹೊರತರುತ್ತಿವೆ. ಕನ್ನಡ ಕಲಿಯಲು ಆಸಕ್ತಿ ಉಳ್ಳವರಿಗಾಗಿ ರಾತ್ರಿ ಶಾಲೆ ನಡೆಸುತ್ತಿವೆ. ಸಂಗೀತ, ನೃತ್ಯದ ಶಾಲೆಗಳನ್ನು ನಡೆಸುತ್ತಿವೆ. ಕೆಲ ಸಂಸ್ಥೆಗಳು ಶಾಲಾ ಕಾಲೇಜಿನಲ್ಲಿ, ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಉತ್ತೇಜಕ ಬಹುಮಾನ ಕೊಡುವುದರ ಮೂಲಕ ಪ್ರೋತ್ಸಾಹ ನೀಡುತ್ತಿವೆ. ಇದಲ್ಲದೆ ಅಣು ಶಕ್ತಿ ನಗರದ ಕನ್ನಡ ಸಂಘದವರು ಒಂದು ವಿಜ್ಞಾನ ಪತ್ರಿಕೆ ಹೊರತರುತ್ತಿರುವ ವಿಷಯ ಬೆಳಕಿಗೆ ಬಂತು. ಬಂಟರ ಸಂಘದವರು ಎರಡು ಹೈಸ್ಕೂಲುಗಳನ್ನು ನಡೆಸುತ್ತಿರುವ ವಿಷಯ ತಿಳಿದು ಬಂತು. ಈ ಸಂಸ್ಥೆಗಳನ್ನೆಲ್ಲಾ ಕರ್ನಾಟಕ ಸರ್ಕಾರದ ಅನುದಾನ ಬಹುತೇಕ ದೊರೆಯುತ್ತಿದೆ. ಮುಂದೆಯೂ ಸಹ. ಈ ಕನ್ನಡ ಸಂಘಗಳಿಗೆ ಮುಕ್ತ ಹಸ್ತದಿಂದ ಅನುದಾನ ಕೊಡಬೇಕೆಂದೂ, ಅನುದಾನ ದೊರೆಯದೇ ಇರುವ ಸಂಸ್ಥೆಗಳಿಗೂ ಅನುದಾನವನ್ನು ಕೊಡಬೇಕೆಂಬುದು ಪ್ರತಿನಿಧಿಗಳೆಲ್ಲರ ಮನವಿಯಾಗಿತ್ತು.



*ಡಾ॥ ಜಿ. ಡಿ. ಜೋಶಿಯವರು ಸಭೆಯಲ್ಲಿ ತಮ್ಮ ಅನಿಸಿಕೆಯನ್ನು ಹಂಚಿ ಕೊಳ್ಳುವುದನ್ನು ಕೇಳುತ್ತಿರುವ ಗಣ್ಯರು.*
*ಎಡದಿಂದ ಬಲಕ್ಕೆ: ಶ್ರೀ ಸಿ. ಅಶ್ವಿನ್, ಶ್ರೀ ಮುದ್ದು ಕೃಷ್ಣ, ಶ್ರೀ ಚಂದ್ರಹಾಸ ಗುಪ್ತ, ಶ್ರೀಮತಿ ಲೀಲಾ ರಾಜ್ ಕುಮಾರ್ ಹಾಗೂ ಶ್ರೀ ಪ್ರಸಾದ್.*

ನಿರ್ದೇಶಕ ಮುದ್ದು ಕೃಷ್ಣಾರವರು ಮಾತನಾಡುತ್ತಾ ನನಗೆ ಸಾಧ್ಯವಿದ್ದ ಮಟ್ಟಿಗೂ ಅನುದಾನ ಕೊಡುವುದಾಗಿ ಭರವಸೆ ಇತ್ತರು.

ಕಾರ್ಯದರ್ಶಿಗಳಾದ ಚಂದ್ರಹಾಸ ಗುಪ್ತಾರವರು ಬೃಹನ್ಮುಂಬೈನಲ್ಲಿರುವ ನಾನಾ ಸಂಸ್ಥೆಗಳೂ ಸಹ ಒಟ್ಟಿಗೆ ಸೇರಿ ಒಗ್ಗಟ್ಟಿನಿಂದ ಕಾರ್ಯ ನಡೆಸಲು ಸಲಹೆ ನೀಡಿದರು. ಇದಲ್ಲದೆ ಸಂಸ್ಕೃತಿ ಇಲಾಖೆಯ ವತಿಯಿಂದ ಬೊಂಬಾಯಿಗೆ ಗಾಯನ, ನೃತ್ಯ, ಜಾನಪದ ನೃತ್ಯ, ಸಂಗೀತ, ನಾಟಕ ಇತ್ಯಾದಿ ತಂಡಗಳನ್ನು ಕಳಿಸುವುದಾಗಿಯೂ, ಬಂದ ಅತಿಥಿಗಳನ್ನು ನೋಡಿ ಕೊಳ್ಳುವುದು ನಿಮಗೆ ಸೇರಿದ್ದೆಂದೂ ಸಹ ತಿಳಿಸಿದರು.

ಬಂದ ಅತಿಥಿಗಳಿಗೆ ವಂದನಾರ್ಪಣೆ, ಪುಷ್ಪಗುಚ್ಛ ಸಮರ್ಪಣೆಯ ನಂತರ ಭೋಜನದ ಏರ್ಪಾಡಿತ್ತು. ಭೋಜನಾನಂತರ ಕಾರ್ಯಕ್ರಮ ಕೊನೆಗೊಂಡಿತು.



*ಸಭೆಯಲ್ಲಿ ಉಪಸ್ಥಿತರಾಗಿದ್ದ ವಿವಿಧ ಕನ್ನಡ ಸಭೆಗಳ ಪ್ರತಿನಿಧಿಗಳು.*

- ರಮ ಕೃಷ್ಣಸ್ವಾಮಿ.

# ಮುಂಬಯಿ ಮೈಸೂರು ಅಸೋಸಿಯೇಷನ್ ಒಂದು ಸವಿನೆನಪು

**ಟಿ. ಆರ್. ಎಸ್. ಆನಂದ**



ನಾನು 1944ರಲ್ಲಿ ಅಸೋಸಿಯೇಷನ್ನಿಗೆ ಸದಸ್ಯನಾದೆ. ನಮ್ಮ ಮನೆ ಮಾಟುಂಗನಲ್ಲೆ ಇದ್ದುದರಿಂದ ಪ್ರತಿ ನಿತ್ಯವೂ ಅಲ್ಲಿಗೆ ಹೋಗಲು ಅನುಕೂಲವಾಗುತ್ತಿತ್ತು. ನನ್ನ ಹಾಗೆ ಬಹಳ ಜನ ಸದಸ್ಯರು ಸಾಯಂಕಾಲದ ಹೊತ್ತು ಅಲ್ಲಿ ಸೇರುತ್ತಿದ್ದರು. ಎಲ್ಲರೂ ಸುಮಾರು ಮಾಟುಂಗ ಸುತ್ತ ಮುತ್ತಲಲ್ಲೆ ನಿವಾಸ ಮಾಡುತ್ತಿದ್ದುದರಿಂದ, ಅಸೋಸಿಯೇಷನ್ ನಲ್ಲಿ ಸೇರಲು ಅನುಕೂಲವಾಗುತ್ತಿತ್ತು. ಶನಿವಾರ, ಭಾನುವಾರ ಅಥವಾ ರಜಾ ದಿನಗಳಲ್ಲಿ ಇನ್ನೂ ಹೆಚ್ಚು ಸದಸ್ಯರು ಸೇರುತ್ತಿದ್ದರು. ಎಷ್ಟು ಕುರ್ಚಿಗಳಿದ್ದರೂ ಕಡಿಮೆ ಅನ್ನಿಸುತ್ತಿತ್ತು. ಅಸೋಸಿಯೇಶನ್ ಕಟ್ಟಡದ ಮುಂದೆ ಇದ್ದ ಹುಲ್ಲಿನ ಮೇಲೆ ಸಹ ಜನಗಳು ಕುಳಿತುಕೊಳ್ಳುತ್ತಿದ್ದರು. ಅದಲ್ಲದೆ ಊಟದ ಮೆಸ್ಸು ಬೇರೆ ಇತ್ತು. ರಾತ್ರಿ ಹೊತ್ತು ಸುಮಾರು 60-70 ಜನ ಊಟಕ್ಕೆ ಬರುತ್ತಿದ್ದರು. ಒಂದು ಊಟದ ಬೆಲೆ ಸುಮಾರು $1\frac{1}{2}$ ಇಂದ 2 ರೂಪಾಯಿ ವರೆಗೆ ಇತ್ತು. ಊಟ ಚೆನ್ನಾಗಿರುತ್ತಿತ್ತು. ಜನಗಳಿಗೆ ಅದೇ ಒಂದು ಆಕರ್ಷಣೆ ಆಗಿತ್ತು.

ನಾನು ಸದಸ್ಯನಾಗಿ ಸ್ವಲ್ಪ ದಿನಗಳಾದ ಮೇಲೆ ಕಾರ್ಯಕಾರಿ ಸಮಿತಿಯಲ್ಲಿ ಸೇರಿದೆ. ಪ್ರತಿಯೊಂದು ವಿಭಾಗ, ಅಂದರೆ ಸ್ಪೋರ್ಟ್ಸ್, ಸಾಂಸ್ಕೃತಿಕ, ಗ್ರಂಥಾಲಯ, ಎಲ್ಲದಕ್ಕೂ ಬೇರೆ ಬೇರೆ ಕಾರ್ಯಕಾರಿ ಸಮಿತಿ ಮಾಡಿಕೊಂಡಿದ್ದೆವು. ಆಯಾ ವಿಭಾಗದ ಸಮಿತಿಯವರು ಆಯಾ ವಿಭಾಗದ ಕಾರ್ಯಗಳನ್ನು ನಡೆಸುತ್ತಿದ್ದರು. ಆಗ ಅಸೋಸಿಯೇಷನ್ ಕಟ್ಟಡ ಮೊದಲನೆಯ ಮಹಡಿಯವರೆಗೆ ಇತ್ತು. ಈ ಮಹಡಿಯಲ್ಲಿ ಒಂದು ದೊಡ್ಡ ಹಾಲ್ ಮಾತ್ರ ಇತ್ತು. ಅಲ್ಲೇ ಎಲ್ಲ ಕಾರ್ಯಕ್ರಮಗಳು ನಡೆಯುತ್ತಿದ್ದವು. ಪ್ರತಿ ತಿಂಗಳು ಬಿಟ್ಟು ತಿಂಗಳು ಸದಸ್ಯರಿಗೋಸ್ಕರ ಏನಾದರೊಂದು ನಾಟಕದ ಕಾರ್ಯಕ್ರಮ ಇಡುತ್ತಿದ್ದೆವು. ತುಂಬ ಸದಸ್ಯರಿದ್ದುದರಿಂದ ಹಾಲ್‌ನಲ್ಲಿ ಎಲ್ಲರಿಗೂ ಜಾಗವಿರುತ್ತಿರಲಿಲ್ಲ. ಹೀಗಾಗಿ ಅದೇ ನಾಟಕ ಎರಡು ದಿನ ನಡೆಸಿ ಎಲ್ಲರಿಗೂ ನೋಡುವ ಅವಕಾಶವಿರುತ್ತಿತ್ತು.

ನಾನು ಕಾರ್ಯಕಾರ್ಯ ಸಮಿತಿಯಲ್ಲಿ ಸುಮಾರು 13-14ಗಳ ವರೆಗೂ ಕೆಲಸ ಮಾಡಿದೆ. ದಿವಂಗತ ಶ್ರೀ ಬಿ. ನಾರಾಯಣ ಸ್ವಾಮಿಯವರು ಅಸೋಸಿಯೇಷನ್ನಿನ ಅಧ್ಯಕ್ಷರಾಗಿದ್ದಾಗ, ನಾನು ಸೆಕ್ರಟರಿಯಾಗಿದ್ದೆ. ಅವರ ಅಧ್ಯಕ್ಷತೆಯಲ್ಲೇ, ಮೊಟ್ಟ ಮೊದಲು ಗಣಪತಿಯ ಉತ್ಸವ ಬಹಳ ವಿಜೃಂಭಣೆಯಿಂದ ನಡೆಯುತ್ತಿತ್ತು. ಎಲ್ಲ ಸದಸ್ಯರು ಸೇರುತ್ತಿದ್ದರು. ವಿಸರ್ಜನೆಯ ದಿವಸವಂತೂ ನೂರರ ಇನ್ನೂರಕ್ಕೂ ಹೆಚ್ಚು ಸದಸ್ಯರು ಸೇರುತ್ತಿದ್ದರು. ಎಲ್ಲರನ್ನೂ ಬಸ್ಸು, ವ್ಯಾನು ಇತ್ಯಾದಿಗಳಲ್ಲಿ, ವಿಸರ್ಜನೆಗೋಸ್ಕರ ಗಣಪತಿಯ ಜೊತೆಯಲ್ಲಿ ಶಿವಾಜಿ ಪಾರ್ಕ್ ಬೀಚ್‌ಗೆ ಕರೆದುಕೊಂಡು ಹೋಗುತ್ತಿದ್ದೆವು. ವಿಸರ್ಜನೆಯ ನಂತರ ಬೀಚ್‌ನಲ್ಲೇ ಎಲ್ಲರಿಗ ಪ್ರಸಾದ (ಅಂದರೆ ರುಚಿಯಾದ ಊಟ) ವಿನಿಯೋಗ ಆಗುತ್ತಿತ್ತು. ಹೀಗೆಯೇ ಉತ್ಸವದ ಜೊತೆಗೆ ಸದಸ್ಯರಿಗೆ ಒಂದು ಪಿಕ್‌ನಿಕ್ ತರಹ ಇರುತ್ತಿತ್ತು. ವರ್ಷಕ್ಕೊಂದು ಸರಿ ಪಬ್ಲಿಕ್‌ಗಾಗಿ ನಾಟಕ ಮಾಡುತ್ತಿದ್ದೆವು. ಇದು ಯಾವುದಾದರೂ ದೊಡ್ಡ ರಂಗ ಮಂದಿರದಲ್ಲಿ ನಡೆಯುತ್ತಿತ್ತು. ಇದಕ್ಕೆ ಟಿಕೆಟ್ ಇಟ್ಟಿರುತ್ತಿದ್ದೆವು. ಹೊರಗಡೆಯ ಜನರು ಬಂದು ನೋಡುತ್ತಿದ್ದರು. ಇದರಲ್ಲಿ ಬಂದ ದುಡ್ಡನ್ನು ಅಸೋಸಿಯೇಷನ್ ಖರ್ಚು ವೆಚ್ಚಕ್ಕೆ ಉಪಯೋಗಿಸಿಕೊಳ್ಳುತ್ತಿದ್ದೆವು.

ಆಟದ ವಿಭಾಗದಲ್ಲೂ ಬಹಳಷ್ಟು ಕಾರ್ಯಕ್ರಮಗಳು ನಡೆಯುತ್ತಿತ್ತು. ಟೇಬಲ್ -ಟೆನ್ನಿಸ್, ಬಾಸ್ಕೆಟ್ ಬಾಲ್, ಬಿಲಿಯರ್ಡ್ಸ್ ಮುಂತಾದ ಆಟಗಳಾಡುತ್ತಿದ್ದೆವು. ಅದಲ್ಲದೆ ಓಪನ್ ಟೋರ್ನ್‌ಮೆಂಟ್ಸ್‌ಗಳನ್ನು ನಡೆಸುತ್ತಿದ್ದೆವು. ಬೇರೆಯವರು ಇದರಲ್ಲಿ ಭಾಗವಹಿಸಬಹುದಿತ್ತು. ಪ್ರತಿ ವರ್ಷ ಸದಸ್ಯರಿಗೆ ಫ್ಯಾನ್ಸಿ ಡ್ರೆಸ್, ಟಾಲೆಂಟ್ಸ್ ಕಾಂಪಿಟೇಷನ್, ಹಾಗೂ Annual Sports ನಡೆಸುತ್ತಿದ್ದೆವು. ಇದರಲ್ಲಿ ಹೆಂಗಸರು, ಮಕ್ಕಳು ಎಲ್ಲರೂ ಭಾಗವಹಿಸುತ್ತಿದ್ದರು.

ನಾನು ಸಹ ಬೇಕಾದಷ್ಟು ನಾಟಕಗಳಲ್ಲಿ, ಹೆಣ್ಣು ಗಂಡು ಎಲ್ಲ ತರಹದ ಪಾತ್ರಗಳನ್ನು ಮಾಡಿದ್ದೆ. ಅದಲ್ಲದೆ ಕೆಲವು ನಾಟಕಗಳ ನಿರ್ದೇಶನ ಸಹ ಮಾಡಿದ್ದೆ. ಒಟ್ಟಿನಲ್ಲಿ ಈ ಅಸೋಸಿಯೇಷನಿಂದ ನಾವು ಕನ್ನಡಿಗರೆಲ್ಲ ಸೇರಲು ಒಳ್ಳೆಯ ಅವಕಾಶವಿತ್ತು. ಈಗ ಅಸೋಸಿಯೇಷನ್ ಬಹಳ ದೊಡ್ಡದಾಗಿ ಬೆಳೆದಿದೆ. ಆದರೆ ಸಾಯಂಕಾಲದಲ್ಲಿ, ಯಾರು ಸದಸ್ಯರು ಕಾಣುವುದಿಲ್ಲ. ಈ ಕಾಲದಲ್ಲಿ ಎಲ್ಲರೂ ತಮ್ಮ ತಮ್ಮ ಕಾರ್ಯಗಳಲ್ಲೆ ಬಿಜಿಯಾಗಿರುತ್ತಾರೆ. ಅದಲ್ಲದೆ ಎಲ್ಲರೂ ತುಂಬ ದೂರದ ಜಾಗಗಳಿಂದ ಬರಬೇಕಾದರೆ ತೊಂದರೆಯೂ ಇದೆ. ಇದೆಲ್ಲ ನೋಡಿದರೆ ನಮ್ಮ ಕಾಲದಲ್ಲೇ ಚೆನ್ನಾಗಿತ್ತು ಅನ್ನಿಸುತ್ತೆ.

●

FOR ALL YOUR DOMESTIC
AND INTERNATIONAL
TRAVEL ARRANGEMENTS
*CONTACT*

**AUGUST TRAVEL SERVICE**

Agents For
INDIAN AIR LINES,
EAST-WEST,
MODI LUFT &
JET AIRLINES

**REGD. OFFICE:**
3/15 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
**ALSO AT:**
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50

ಕತೆ

# ಬಲಿ

• ಸ. ಬಿ. ಕು.

ಗಂಡಿ ಒತ್ತಿದೊಡನೆಯೇ ಸರಕ್ಕನೆ ತೆರೆದುಕೊಂಡಿತು ಚೂರಿ. ಒಳ ಕೋಣೆಯ ಬಾಗಿಲಿಗೆ ಆತು ನಿಂತುಕೊಂಡಿದ್ದ ಸುನೀತಳ ಎದೆ ಒಮ್ಮೆಲೇ ದಸಕ್ಕೆಂದಿತು. ಆದರೆ ವಿಲೋಭ ಬಹಳ ಅಭಿಮಾನದಿಂದ ಆ ಚೂರಿಯ ಒಡೆಯನಾದ ಕಾಲ್ಯಾನ ಕಡೆ ನೋಡಲಾರಂಭಿಸಿದ.

``ನೋಡಿದೆಯಾ ವಿಲೋಭ. ಈ ಆಯುಧ ನನ್ನ ಕೈಯಲ್ಲಿ ಇರುವ ತನಕ ಯಾವ ಮಗನಿಗೆ ನನ್ನನ್ನು ಕೆಣಕುವ ಎದಾಗರಿಕೆ ಇದೆ? ಇದು ಎಷ್ಟು ನನ ವೈರಿಗಳ ರಕ್ತ ಕುಡಿದಿದೆ ಎಂದು ನಿನಗೆ ಗೊತ್ತೆ? - ಹೋ, ನನನಗೇನೇ ಲೆಕ್ಕವಿಲ್ಲ. ನಿನಗೆ ನಿನ್ನ ಕಾರ್ಖಾನೆಯಲ್ಲಿ ಯಾರಾದರೂ ಕಿರುಕುಳ ಕೊಡುತ್ತಿದ್ದರೆ ಹೇಳು. ನಿನ್ನ ಕಡೆ ಮುಖವೆತ್ತದಂತೆ ಮಾಡಿ ಬಿಡುತ್ತೇನೆ." ಕಾಲ್ಯಾ ಚೂರಿಯನ್ನು ಮಡಚಿ ಕಿಸೆಗೆ ಸೇರಿಸುತ್ತಾ ಹೇಳಿದ. ಸುನೀತ ಒಳಕೋಣೆ ಸೇರಿ ಹೆದರಿ ಗಡಗಡ ನಡುಗುತ್ತಿದ್ದಳು. ತನ್ನ ಗಂಡ ಈ ಮಾರಿಯನ್ನು ಮನೆಗೆ ಯಾಕೆ ಕರಕೊಂಡು ಬಂದನಪ್ಪಾ ಎಂದು ಚಿಂತಿಸಲಾರಂಭಿಸಿದಳು.

``ಹೇ, ಚಹಾ ಮಾಡೆ" ಎಂದು ಕೂಗಿದ ವಿಲೋಭ. ಅವನ ಧ್ವನಿಗೂ ಈಗ ಸ್ವಲ್ಪ ಗಡಸುತನ ಬಂದಿತ್ತು. ಗಂಡನ ಆಜ್ಞೆ ಪಾಲಿಸಲೇ ಬೇಕಲ್ಲಾ? ಸುನೀತ ಎರಡು ಕಪ್ ಚಾ ತಯಾರಿಸಿ ಹೊರಕೋಣೆಗೆ ತಂದಳು. ಅವಳ ಕೈ ಸಿಟ್ಟು ಮಿಶ್ರಿತ ಹೆದರಿಕೆಯಿಂದ ನಡುಗುತ್ತಿತ್ತು. ಕಾಲ್ಯಾನ ಕಡೆ ನೋಡುವ ಧೈರ್ಯವೂ ಅವಳಲ್ಲಿ ಇರಲಿಲ್ಲ. ಕಾಲ್ಯಾ ಚಾ ಕುಡಿದು ಹೋಗಿ ಬಿಟ್ಟ.

``ಈ ಗುಂಡಾ ಅಲ್ಲದಿದ್ದರೆ ಗೆಳೆತನ ಮಾಡುವರೆ ನಿಮಗೆ ಬೇರೆ ಯಾರೂ ಸಿಗಲಿಲ್ಲವೇ" ಸುನೀತ ಸಿಟ್ಟನ್ನು ತಡೆದುಕೊಂಡು ವಿಚಾರಿಸಿದಳು.

``ತಲೆ ಕೆಟ್ಟವರಂತೆ ಮಾತನಾಡಬೇಡ. ಕಾಲ್ಯಾನಂತವರ ಗೆಳೆತನ ಲಭಿಸುವುದು ಒಂದು ಭಾಗ್ಯವೆಂದೇ ತಿಳಿ". ಸಾಮಾನ್ಯವಾಗಿ ಪುಕ್ಕಲು ಸ್ವಭಾವದ ವಿಲೋಭನಿಗೆ ಕಾಲ್ಯಾನ ಚೂರಿ ಕಂಡು ನಂತರ ಧೈರ್ಯ ಬಂದಿತ್ತು.

``ನೋಡಿ, ನಾನು ಹೇಳುವುದನ್ನು ಕೇಳಿ. ಅವನ ಗೆಳೆತನ ನಿಮಗೆ ಬೇಡ. ಅವ ಸಭ್ಯನಂತೆ ತೋರುವುದಿಲ್ಲ." ಸುನೀತ ವಿಲೋಭನಿಗೆ ಸಮಜಾಯಿಸಿ ಹೇಳಲು ಪ್ರಯತ್ನಿಸಿದಳು.

``ಅದೇ ಹೇಳುವುದು ಹೆಂಗಸರಿಗೆ ಬುದ್ಧಿ ಕಡಿಮೆ ಎಂದು. ಮಂತ್ರಿಗಳು, ಶಾಸಕರು, ಎಲ್ಲರೂ ಅವನ ಗೆಳೆತನ ಮಾಡಲು ಬಯಸುತ್ತಾರೆ. ಚುನಾವಣೆಗಳ ಸಂದರ್ಭಗಳಲ್ಲಿ ನೋಡಬೇಕು - ರಾಜಕೀಯ ಮುಖಂಡರು ಅವನ ಮನೆ ಬಾಗಿಲಲ್ಲೇ ಸುತ್ತುತ್ತಿರುತ್ತಾರೆ. ಅವನ ಸಹಾಯ ಸಹಕಾರವಿಲ್ಲದಿದ್ದರೆ ಅವರು ಚುನಾವಣೆಗಳಲ್ಲಿ ಗೆಲ್ಲುವುದೇ ಅಸಂಭವ. ಅಂತಹ ವ್ಯಕ್ತಿಯ ಗೆಳೆತನ ಮಾಡುವುದು ಬೇಡವೆನ್ನುತ್ತಿಯಲ್ಲ?"

``ನಿಮಗೆ ಯಾವ ಚುನಾವಣೆಗೂ ನಿಲ್ಲಲಿಕ್ಕಿಲ್ಲವಲ್ಲ? ಯಾಕೆ ಸುಮ್ಮಗೆ ಬೀದಿಯ ಮಾರಿಯನ್ನು ಮನೆಯೊಳಗೆ ತರುತ್ತೀರಿ? ನೋಡಿ ನಾನು ಹೇಳುವುದನ್ನು ಕೇಳಿ. ನಿಮಗೆ ಅವನಿಂದ ಯಾವ ಪ್ರಯೋಜನವೂ ಆಗುವಂತಿಲ್ಲ. ಇದ್ದುದರಲ್ಲಿ ನಾವು ಸುಖವಾಗಿದ್ದೇವೆ. ಅವನನ್ನು ಇನ್ನು ನಮ್ಮ ಮನೆಗೆ ಕರೆಯಬೇಡಿ. ಅವನನ್ನು ನೋಡಿದರೆ ನನಗೆ ಹೆದರಿಕೆಯಾಗುತ್ತದೆ" ಸುನೀತ ದೈನ್ಯದಿಂದ ವಿನಂತಿಸಿಕೊಂಡಳು.

``ಅವನು ಅಂತವನಲ್ಲ ಕಣೇ. ನಮ್ಮಂತೆ ಸಂಸಾರವಿದ್ದವ, ಮೂರು ಸಂಸಾರದ ಹೊಣೆ ಹೊತ್ತವ. ಮೂವರು ಹೆಂಡಂದಿರಿದ್ದಾರೆ-ಮಕ್ಕಳಿದ್ದಾರೆ". ಸುನೀತಳಿಗೆ ಆಶ್ಚರ್ಯ, ಕುತೂಹಲ, ಮೂವರು ಹೆಂಡಿರು! ಮೂರು ಸಂಸಾರ!!

``ಅವನು ನಿಮ್ಮಂತೆಯೇ ಕಾರ್ಖಾನೆಯಲ್ಲಿ ಕೆಲಸ ಮಾಡುವುದಲ್ಲವೇ? ನಿಮಗೆ ಸಿಗುವ ಸಂಬಳದಿಂದ ನಮ್ಮಿಬ್ಬರ ಜೀವನ ಹೇಗೋ ಹೇಗೋ, ಸಾಗುತ್ತದೆನ್ನ. ಆದರೆ ಅವ ಮೂರು ಸಂಸಾರ ನೋಡಿಕೊಳ್ಳುತ್ತಿದ್ದಾನೆಂದು ಹೇಳುತ್ತೀರಿ" ಸುನೀತ ಕುತೂಹಲ ತಡೆಯಲಾರದೆ ವಿಚಾರಿಸಿದಳು.

``ಹಾಗೆ ಬಾ. ಸುಮ್ಮಗೆ ಸಿಟ್ಟಾಗಬೇಡ. ಅವನು ಕಾರ್ಮಿಕರ ನೇತ. ಮೂರು ಕಾರ್ಖಾನೆಯಿಂದ ಪ್ರತೀ ತಿಂಗಳು ಸಂಬಳ ಸಿಗುತ್ತದೆ. ಆದರೆ ಒಂದು ಗಮ್ಮತ್ತು. ಅವ ಎಲ್ಲಿಯೂ ಕೆಲಸ ಮಾಡುವುದಿಲ್ಲ. ಹಣಕ್ಕೇನೂ ಕೊರತೆಯಿಲ್ಲ. ನೀರಿನಂತೆ ಖರ್ಚು ಮಾಡುತ್ತಾನೆ. ರಾಜನಂತೆ ಜೀವಿಸುತ್ತಾನೆ. ಅವನ ವಿರುದ್ಧ ಯಾರು ಏನೂ ಹೇಳುವಂತಿಲ್ಲ. ಅಂತಹ ಧೈರ್ಯ ಯಾರಿಗಿದೆ?" ವಿಲೋಭ ತನ್ನ ಗೆಳೆಯನನ್ನು ಬಹಳ ಅಭಿಮಾನದಿಂದ ಹೊಗಳಲಾರಂಭಿಸಿದ. ಆದರೆ ಸುನೀತಳ ಹೆದರಿಕೆ ಇನ್ನಷ್ಟು ಹೆಚ್ಚಿತು. ಕಾಲ್ಯಾ ಎಂತವನೆಂದು ಈಗ ಅವಳಿಗೆ ಸಂಪೂರ್ಣ ತಿಳಿಯಿತು. ಆದರೆ ತನ್ನ ಗಂಡನಿಗೆ ಯಾವ ರೀತಿಯಿಂದ ಹೇಳುವುದು? ಕಾಲ್ಯಾ ವಿಲೋಭನ ಆರಾಧ್ಯ ದೇವತೆಯೇ ಆಗಿಬಿಟ್ಟಿದ್ದ.

``ನೀವು ಅವನ ಬಗ್ಗೆ ಏನೇ ತಿಳಿದುಕೊಳ್ಳಿ, ಗೆಳೆತನ ಮಾಡಿ, ಏನಾದರೂ ಮಾಡಿ. ಆದರೆ ಅವನನ್ನು ಇನ್ನು ಮುಂದೆ ಈ ಮನೆಗೆ ಆಮಂತ್ರಿಸ ಬೇಡಿ." ಎಂದು ಹೇಳಿ ಸುನೀತ ಒಳಕೋಣೆಗೆ ನಡೆದೇ ಬಿಟ್ಟಳು.

``ಕತ್ತೆ, ಬುದ್ಧಿಯೇ ಇಲ್ಲ." ವಿಲೋಭ ಮನಸ್ಸಿನಲ್ಲೇ ಹೇಳಿಕೊಂಡ.

* * *

ರಾತ್ರಿ ಹನ್ನೆರಡು ಗಂಟೆ. ಕಾರ್ಖಾನೆಯಲ್ಲಿ ಎರಡನೇ ಪಾಳಿ ಮುಗಿಸಿ ಬಂದ ಕಾರ್ಮಿಕರೆಲ್ಲಾ ಮಲಗಿದ್ದರು. ವಿಲೋಭನಿಗೆ ಮಾರನೆ ದಿನ ಪ್ರಥಮ ಪಾಳಿಯಿದ್ದುದರಿಂದ ಊಟ ತೀರಿಸಿ ಬೇಗನೆ ಮಲಗಿದ್ದ. ಬಾಗಿಲು ಬಡಿದ ಶಬ್ದ. ಸುನೀತಳಿಗೆ ಒಮ್ಮೆಲೇ ಎಚ್ಚರವಾಯಿತು. ಈ ಅಪರಾತ್ರಿಯಲ್ಲಿ ಬಾಗಿಲು ಬಡಿಯುವವರು ಯಾರು? ಅವಳ ಎದೆ ಹೆದರಿಕೆಯಿಂದ ಹೊಡಕೊಳ್ಳಲಾರಂಭಿಸಿತು. ಮಲಗಿ ಗೊರಕೆ ಹೊಡೆಯುತ್ತಿರುವ ಗಂಡನನ್ನು ಎಬ್ಬಿಸಿದಳು. ಬಾಗಿಲು ಬಡಿಯುವ ಶಬ್ದ ತೀವ್ರವಾಯಿತು. ವಿಲೋಭ ಎದ್ದುಕೊಂಡು ಬಾಗಿಲ ಕಡೆ ಹೋದ.

``ಮೊದಲು ಬಾಗಿಲ ಸಂದಿನಿಂದ ಯಾರೆಂದು ನೋಡಿಕೊಳ್ಳಿ" ಸುನೀತ ಹೇಳಿದಳು. ಅವಳ ಸ್ವರ ನಡುಗುತ್ತಿತ್ತು.

ವಿಲೋಭ ಮೆಲ್ಲನೆ ಬಾಗಿಲು ತೆರೆದ. ಬಾಗಿಲು ತೆರೆದ ಕೂಡಲೇ ಕಾಲ್ಯಾ ಅವರ ಕೋಣೆಯೊಳಗೆ ನುಗ್ಗಿಯೇ ಬಿಟ್ಟ. ಅವನೇ ಬಾಗಿಲು ಮುಚ್ಚಿದ. ಅವನ ರಕ್ತಮಯವಾದ ಅಂಗಿಯನ್ನು ಕಂಡಾಗ ಸುನೀತಳ ತಲೆ ಗಿರ್ರೆಂದು ತಿರುಗಲಾರಂಭಿಸಿತು. ಒಮ್ಮೆಲೇ ಚೀರಿ ಬಿಡಬೇಕೆಂದುಕೊಂಡವಳಿಗೆ ಸ್ವರವೇ ಹೊರಡಲಿಲ್ಲ.

``ಹೆದರಬೇಡಿ. ನಾನು ಇಲ್ಲಿಗೆ ಬಂದದ್ದನ್ನು ಯಾರೂ ನೋಡಲಿಲ್ಲ". ಕಾಲ್ಯಾ ತನ್ನ ರಕ್ತಮಯವಾದ ಅಂಗಿಯನ್ನು ಕಳಚಲಾರಂಭಿಸಿದ.

``ಇದನ್ನು ಕೂಡಲೇ ಚೆನ್ನಾಗಿ ಒಗೆದು ಹಾಕಿ ಬಿಡಿ" ಎಂದು ಅಂಗಿಯನ್ನು ವಿಲೋಭನ ಕೈಗಿತ್ತ. ವಿಲೋಭ ಅಂಗಿಯನ್ನು ತೆಗೆದುಕೊಂಡ. ಆದರೆ ಹೆದರಿ ಕಂಗಾಲಾಗಿ ಹೋಗಿದ್ದ. ಈ ಚಾಂಡಾಲ ಯಾರ ಕೊಲೆ ಮಾಡಿ ಬಂದ? ಇಲ್ಲಿಗೆ ಯಾಕೆ ಬಂದ? ಅಯ್ಯೋ, ನನ್ನ ಗ್ರಹಚಾರವೇ! ಎಂದು ಚೀರಿತು ಅವನ ಮನಸ್ಸು.

``ಸಮಯ ಕಾಯುತ್ತಲಿದೆ. ಇಂದು ನನ್ನ ಕೈಗೆ ಸಿಕ್ಕಿ ಬಿದ್ದ ಬದ್ಮಾಶ್. ದೊಡ್ಡ ರಾಜನಂತೆ ಮೆರೆಯುತ್ತಿದ್ದ" ಕಾಲ್ಯಾ ಏನೇನೋ ಹೇಳಲಾರಂಭಿಸಿದ. ಯಾರನ್ನು ತಿವಿದು ಬಂದನೆಂದು ವಿಚಾರಿಸುವ ಧೈರ್ಯ ವಿಲೋಭನಲ್ಲಿ ಇರಲಿಲ್ಲ. ಅವನ ನಾಲಗೆಯೇ ನಿಂತು ಹೋಗಿತ್ತು.

``ಕೂಡಲೇ ಅಂಗಿ ಒಗೆದು ಹಾಕು. ನೆತ್ತರಿನ ಕಲೆ ಸ್ವಲ್ಪವೂ ಉಳಿಯಬಾರದು" ಎಂದು ವಿಲೋಭನಿಗೆ ಆದೇಶವಿತ್ತು, ತನ್ನ ಪಾದರಕ್ಷೆಯೊಳಗೆ ಸಿಕ್ಕಿಸಿಕೊಂಡಿದ್ದ ಚೂರಿಯನ್ನು ಹೊರ ತೆಗೆದ. ಅದು ರಕ್ತಮಯವಾಗಿತ್ತು. ಈಗಲೂ ಅದರಿಂದ ರಕ್ತ ತೊಟ್ಟಿಕ್ಕುವಂತೆ ಭಾಸವಾಗುತ್ತಿತ್ತು. ಕಾಲ್ಯಾ ಒಳಕೋಣೆಗೆ ಹೋಗಿ ಬಾಲ್ದಿಯಲ್ಲಿ ತುಂಬಿಸಿದ್ದ ನೀರಿನಲ್ಲಿ ಚೂರಿಗೆ ಸಾಬೂನು

ಹಚ್ಚಿ ಚೆನ್ನಾಗಿ ತೊಳೆದ. ಸುನೀತ ಕೋಣೆಯ ಮೂಲೆಯಲ್ಲಿ ಮಂತ್ರಮುಗ್ಧಳಂತೆ ನಿಂತುಕೊಂಡಿದ್ದಳು. ವಿಲೋಭ ಚೆನ್ನಾಗಿ ಸಾಬೂನು ತಿಕ್ಕಿ ಕಾಲ್ಯಾನ ರಕ್ತರಂಜಿತ ಅಂಗಿಯನ್ನು ಒಗೆದು ಒಣಗಲು ಹರವಿದ.

``ನಾನು ಇಲ್ಲಿ ಇದ್ದ ಸುಳಿವನ್ನು ಯಾರಿಗೂ ಕೊಡಬೇಡಿ. ಅಂಗಿ ಒಣಗಿದ ಕೂಡಲೇ ಇಲ್ಲಿಂದ ಹೋಗುತ್ತೇನೆ. ಈಗ ದೀಪ ಆರಿಸಿ ಮಲಗಿರಿ" ಕಾಲ್ಯಾ ಅಧಿಕಾರವಾಣಿಯಿಂದಲೇ ಹೇಳಿದ.

ವಿಲೋಭ ಒಳಕೋಣೆಯಲ್ಲಿ ಚಾಪೆ ಹಾಸಿ ಬಾಗಿಲು ಮುಚ್ಚಿ ಬಿದ್ದು ಕೊಂಡ. ಕಾಲ್ಯಾ ಅವರ ಹೊರ ಕೋಣೆಯಲ್ಲಿದ್ದ ಮಂಚದ ಮೇಲೆ ಮಲಗಿದ. ಸುನೀತಳಿಗೆ ನಿದ್ದೆ ಬರುವಂತಿಲ್ಲ. ಹೆದರಿ ದೇಹವಿಡೀ ಬೆವರಿ ಒದ್ದೆಯಾಗಿತ್ತು. ವಿಲೋಭನು ಚಿಂತೆಗೊಳಗಾದ. ಹೆಂಡತಿಯನ್ನು ಮಾತನಾಡಿಸುವ ಧೈರ್ಯವೂ ಅವನಲ್ಲಿ ಉಳಿದಿರಲಿಲ್ಲ.

ವಿಲೋಭ ಮುಂಜಾನೆ ಒಂದನೇ ಪಾಳಿಗೆನೇ ಕಾರ್ಖಾನೆಗೆ ಕೆಲಸಕ್ಕೆ ಹೋಗಬೇಕು. ಆರು ಗಂಟೆಗೆನೇ ಸುನೀತ ಎದ್ದು ಟೀ, ಚಪಾತಿ ತಯಾರಿಸಲಾರಂಭಿಸಿದಳು. ಕಾಲ್ಯಾನಿಗೆ ಗಾಢ ನಿದ್ದೆ. ಅವಂನ ಅಂಗಿ ಸಂಪೂರ್ಣ ಒಣಗಿರಲಿಲ್ಲ. ಅಲ್ಲದೆ ರಕ್ತದ ಕಲೆಯೂ ಸಂಪೂರ್ಣ ತೊಳೆದು ಹೋಗಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಕಾಲ್ಯಾನನ್ನು ಎಬ್ಬಿಸಿದರೆ ಅವ ಸಿಟ್ಟಾದಾನು ಎಂದು ಅವನನ್ನು ಎಬ್ಬಿಸುವ ಗೋಜಿಗೆ ವಿಲೋಭ ಹೋಗಲಿಲ್ಲ. ಗಂಡ ಹೆಂಡಿರೊಳಗೆ ಈಗಲೂ ಮಾತುಕತೆಯಿಲ್ಲ. ಕೊನೆಗೆ ಸುನೀತಳೇ -

``ನೋಡಿ, ನನಗೆ ಹೆದರಿಕೆಯಾಗುತ್ತದೆ. ನೀವು ಈ ದಿನ ಕೆಲಸಕ್ಕೆ ಹೋಗಬೇಡಿ" ಸುನೀತ ವಿಲೋಭನ ಕಿವಿಯಲ್ಲಿ ಮೆಲ್ಲನೆ ಹೇಳಿದಳು.

``ಕೆಲಸಕ್ಕೆ ಹೋಗದಿದ್ದರೆ ನನ್ನ ಮೇಲೆನೇ ಸಂಶಯ ಬರಬಹುದು. ಹೆದರಬೇಡ. ಅವನಿಗೆ ಎಚ್ಚರವಾದಾಗ ಎದ್ದು ಹೋದಾನು. ಗಲಭೆ ಮಾಡಲಿಕ್ಕಿಲ್ಲ. ನೆರೆಕರೆಯವರಿಲ್ಲವೇ?" ಎಂದು ಹೆಂಡತಿಗೆ ಸಮಾಧಾನ ಹೇಳಿ ವಿಲೋಭ ಏಳು ಗಂಟೆಗೆ ಮೆಲ್ಲನೆ ಮನೆಯ ಕದ ತೆರೆದು ಹೊರಬಿದ್ದ. ಬೀದಿಗಿಳಿದಾಗ ಅಲ್ಲಿ ಜನ ಗುಂಪಾಗಿ ಮಾತನಾಡುವುದು ಕಂಡಿತು. ಅವನ ಎದೆ ಹೊಡೆದುಕೊಳ್ಳಲಾರಂಭಿಸಿತು. ಜನರು ಮಾತನಾಡುವುದನ್ನು ದೂರದಿಂದಲೇ ಕಿವಿಗೊಟ್ಟು ಆಲಿಸಿದ. ಕಳೆದ ರಾತ್ರಿ ಕಾರ್ಮಿಕ ನಾಯಕ ದೇಶಪಾಂಡೆಯನ್ನು ಯಾರೋ ಕೊಲೆ ಮಾಡಿ ಪರಾರಿಯಾಗಿದ್ದಾರೆ ಎಂದು ತಿಳಿಯಿತು. ತನ್ನ ಕಾರ್ಖಾನೆಗೆ ಹೋಗಿ ಕೆಲಸಕ್ಕೆ ಸೇರಿಕೊಂಡ. ಅಲ್ಲಿಯೂ ಅದೇ ಮಾತುಕತೆ. ಕೊಲೆಗಡುಕ ಕೊಲೆ ಮಾಡಿ ಪರಾರಿಯಾಗಿದ್ದಾನೆ. ಪೋಲೀಸರು ಅವನನ್ನು ಪತ್ತೆ ಹಚ್ಚಲು ಪ್ರಯತ್ನಿಸುತ್ತಿದ್ದಾರೆ - ಎಲ್ಲೋ ಅಡಗಿ ಕುಳಿತಿರಬೇಕು - ಎಂದೆಲ್ಲಾ ಸಹೋದ್ಯೋಗಿಗಳ ಮಾತನ್ನು ಕೇಳಿಯೂ ಕೇಳದವನಂತೆ ನಟಿಸಿ ತನ್ನ ಕೆಲಸದಲ್ಲಿ ನಿರತನಾದ. ಆದರೆ ಕೆಲಸ ಮಾಡಲಾಗಲಿಲ್ಲ. ಕೊಲೆಗಾರ ತನ್ನ ಮನೆಯಲ್ಲಿ ಅಲ್ಲ ಮನಸ್ಸಿನಲ್ಲೇ ಅಡಗಿ ಕುಳಿತ್ತಿದ್ದಾನೆಂದು ಅವನಿಗೆ ಭಾಸವಾಯಿತು.

ಕಾಲ್ಯಾ ಮಲಗಿಯೇ ಇದ್ದ. ಅವನ ಅಂಗಿ ಒಣಗಿತ್ತು. ಅವನನ್ನು ಎಬ್ಬಿಸಿ ಹೊರಗೆ ಕಳುಹಿಸುವುದು ಹೇಗೆ? ಒಳಕೋಣೆಯಿಂದ ಹೊರಗೆ ಬರುವ ಧೈರ್ಯವೂ ಸುನೀತಳಲ್ಲಿ ಇಲ್ಲಿಲ್ಲ. ಗಂಡನ ಮೇಲೆ ಸಿಟ್ಟು ಬರುತ್ತಿತ್ತು. ಎಷ್ಟು ಹೇಳಿಕೊಂಡರೂ ಕೇಳಲಿಲ್ಲ. ಈ ಚಾಂಡಾಲ ಯಾರದೋ ಕೊಲೆ ಮಾಡಿ ಇಲ್ಲಿ ಓಡಿ ಬಂದಿದ್ದಾನೆ. ಮೂವರು ಹೆಂಡಿರ ಮನೆಗೆ ಹೋಗದೆ ಇಲ್ಲಿಗೇನೇ ಯಾಕೆ ಬರಬೇಕಿತ್ತು? ನಮ್ಮ ಪ್ರಾಣಕ್ಕೆ ಸಂಚಕಾರವಾಗಿ ಬಂದಿದ್ದಾನೆ. ಬಾಗಿಲು ತೆರೆಯುವುದಾದರೂ ಹೇಗೆ? ಈಗ ಹಾಲಿನವ ಬರಬಹುದು. ನೆರೆಮನೆಯ ಹೆಂಗಸರೂ ಅದೂ, ಇದೂ ಬೇಕಂತ ಬರಬಹುದು. ನೆರೆಮನೆಯ ಸವಿತಾ ತಲೆ ಬಾಚಿಸಿಕೊಳ್ಳಲಿಕ್ಕೆ ಬರಬಹುದು. ಈ ದುಷ್ಟ ಹೊರಕೋಣೆಯಲ್ಲೇ ಕುಂಭಕರ್ಣನಂತೆ ಮಲಗಿದ್ದಾನೆ. ಬಂದವರಿಗೆಲ್ಲ ಏನು ಉತ್ತರ ಕೊಡುವುದು? ಪರಪುರುಷನೊಬ್ಬ ಒಳಗೆ ಮಲಗಿರುವಾಗ ಹೊರಬಾಗಿಲನ್ನು ಮುಚ್ಚಿಟ್ಟರೆ ನೋಡಿದವರು ಏನೆಂದಾರು. ಸುನೀತಳಿಗೆ ಹುಚ್ಚು ಹಿಡಿದಂತಾಯಿತು. ಏನು ಮಾಡಬೇಕೆಂತಲೇ ತಿಳಿಯಲಿಲ್ಲ. ತನ್ನ ದೌರ್ಭಾಗ್ಯವನ್ನು ಹಳಿದುಕೊಂಡಳು. ದುಃಖ ಉಮ್ಮಳಿಸಿ ಬಂತು. ಜೊತೆಗೆ ಸಿಟ್ಟು ಕೂಡ. ಮಲಗಿದ್ದ ಕಾಲ್ಯಾನ ತಲೆಯನ್ನು ಕಲ್ಲಿನಿಂದ ಒಡೆದು ಹಾಕಲೇ?

ಕಾಲ್ಯಾ ಏನೂ ಆಗದವನಂತೆ ಗಾಢ ನಿದ್ದೆಯಲ್ಲಿದ್ದ. ಹೇಗಾದರೂ ಮಾಡಿ ಅವನನ್ನು ಎಬ್ಬಿಸಿ ಹೊರದೂಡಬೇಕು - ಹೇಗೆ? ಸುನೀತ ಒಳಕೋಣೆಯಲ್ಲಿ ಒಂದು ಬಟ್ಟಲನ್ನು ಜೋರಿಂದ ನೆಲಕ್ಕೆ ಅಪ್ಪಳಿಸಿದಳು. ಅದರ ಶಬ್ದದಿಂದಲಾದರೂ ಕಾಲ್ಯಾ ಎಚ್ಚರಗೊಳ್ಳಲೆಂದು. ಆದರೆ ಅವನಿಗೆ ಎಚ್ಚರವಾಗಲಿಲ್ಲ. ಅವನ ಬಳಿ ಹೋಗಿ ಎಬ್ಬಿಸುವ ಧೈರ್ಯ ಅವಳಲ್ಲಿಲ್ಲ. ಅವನ ಹತ್ತಿರ ಹೋಗುವುದೂ ಮಹಾಪಾಪವೆಂದು ಅವಳು ತಿಳಿದುಕೊಂಡಿದ್ದಳು. ಏನು ಮಾಡಲಿ? ಏನು ಮಾಡಲಿ? ಸುನೀತ ದಿಕ್ಕುಗೆಟ್ಟವಳಂತಾದಳು. ಕೊನೆಗೆ ಹೊಳೆಯಿತು ಒಂದು ಉಪಾಯ. ಅದೊಂದೇ ಉಪಾಯ. ಅವಳನ್ನು ಈ ಪರಿಸ್ಥಿತಿಯಿಂದ ಪಾರು ಮಾಡಲು ಸಾಧ್ಯವೆಂದು ತಿಳಿದು ಕೊಂಡಳು.

ಕೈಯಲ್ಲಿ ಒಂದು ಬೀಗ ತೆಗೆದುಕೊಂಡು ಹೊರಕೋಣೆಗೆ ಬಂದು ಬಾಗಿಲು ತೆರೆದು ಹೊರಗೆ ಬಂದಳು. ಹಾಗೆನೇ ಬಾಗಿಲು ಮುಚ್ಚಿ ಹೊರಗಿನಿಂದ ಕದ ಹಾಕಿ ಬೀಗ ಹಾಕಿದಳು. ಹೊರಗೆ ವರಾಂಡದಲ್ಲಿ ಹಲ್ಲು ತಿಕ್ಕುತ್ತಿದ್ದ ನೆರೆಮನೆಯ ಹೆಂಗಸೊಬ್ಬಳು ಮುಂಜಾನೆ ಸುನೀತ ಹೊರಡುವುದನ್ನು ನೋಡಿ - ``ಇಷ್ಟು ಮುಂಜಾನೆ ಬೀಗ ಹಿಡಿದುಕೊಂಡು ಎಲ್ಲಿ ಹೊರಟೆ ಸುನೀತ?" ಎಂದು ವಿಚಾರಿಸಿದಳು. ಈ ನಾಯಿಗಳಿಗೆ ಬೇರೆ ಕೆಲಸವೇ ಇಲ್ಲ. ಎಲ್ಲಿ ಹೋಗುತ್ತಿ? ಎಲ್ಲಿ ಬರುತ್ತಿ? ನಾನು ನರಕಕ್ಕೆ ಹೋಗುತ್ತೇನೆ. ಇವರಿಗೆ ಏನಂತೆ. ``ಕಾಯಿಪಲ್ಲೆ ಬೇಕಿತ್ತು, ತರಲು ಹೊರಟೆ" ಎಂದು ಆ ಹೆಂಗಸತ್ತ ನೋಡದನೇ ಮೆಟ್ಟಿಲಿಳಿದು ಬೀದಿಗೆ ಬಂದಳು. ಅಲ್ಲಿಂದಾ ಸೀದಾ ಹೋದ್ದು ಪೋಲೀಸು ಠಾಣೆಗೆ. ನಡೆದುದೆಲ್ಲವನ್ನು ಚಾಚೂ ತಪ್ಪದೆ ಪೋಲೀಸರಿಗೆ ವರದಿ ಮಾಡಿದಳು. ಪೋಲೀಸರು ಕೂಡಲೇ ಜೀಪು ಏರಿಕೊಂಡು ಅವಳೊಂದಿಗೆ ಹೊರಟರು. ಪೋಲೀಸ್ ಜೀಪು ಕಟ್ಟಡದ ಮುಂದೆ ಬಂದು ನಿಂತಾಗ ನೂರಾರು ಜನ ಕುತೂಹಲದಿಂದ ಹೊರಬಂದು ನೋಡಲಾರಂಭಿಸಿದರು. ಸುನೀತಳ ಹಿಂದೆನೇ ಪೋಲೀಸರು ಬಂದೂಕನ್ನು ಸಜ್ಜು ಮಾಡಿಕೊಂಡು ಮನೆಯ ಮೆಟ್ಟಲೇರಿದರು. ಸುನೀತ ಬಾಗಿಲಿನ ಬೀಗ ತೆರೆದಾಗ ಪೋಲೀಸ್ ಅಧಿಕಾರಿ ಅವಳನ್ನು ತಡೆದು ಕೈಯಲ್ಲಿ ಪಿಸ್ತೂಲು ಹಿಡಿದುಕೊಂಡು ಅವನೇ ಬಾಗಿಲು ತೆರೆದ. ಬಾಗಿಲು ತೆರೆದ ಸದ್ದಿನೊಂದಿಗೆ ಕಾಲ್ಯಾನ ನಿದ್ದೆಯೂ ಹಾರಿ ಹೋಯಿತು. ಕಣ್ಣು ತೆರೆದು ನೋಡುತ್ತಾನೆ ಶಸ್ತ್ರಧಾರಿ ಪೋಲೀಸರು. ಸುನೀತಳ ಕಡೆಗೊಮ್ಮೆ ಅವನ ದೃಷ್ಟಿ ಹರಿಯಿತು. ಆ ದೃಷ್ಟಿಯಲ್ಲಿ ಜಗತ್ತಿನ ಕ್ರೂರತೆಯೆಲ್ಲಾ ಕೇಂದ್ರೀಕೃತವಾಗಿತ್ತು. ಆದರೆ ಸುನೀತ ವಿಚಲಿತಳಾಗಲಿಲ್ಲ. ಒಗೆದು ತೂಗು ಹಾಕಿದ ಅಂಗಿಯನ್ನು, ಚೂರಿಯನ್ನು ಪೋಲೀಸರು ವಶ ಪಡಿಸಿಕೊಂಡರು. ಕಾಲ್ಯಾನನ್ನು ಬಂಧಿಸಿದರು. ಬಂಧಿಸಿಕೊಂಡು ಹೋಗುವಾಗ ಕಾಲ್ಯಾ ಸುನೀತಳ ಕಡೆ ತೀಕ್ಷ್ಣ ದೃಷ್ಟಿ ಬೀರಿ - ``ಬೇವರ್ಸಿ ಹೆಣ್ಣೆ ನನ್ನನ್ನು ಪೋಲೀಸರ ಕೈಗೆ ಕೊಟ್ಟೆಯಲ್ಲಾ, ನಿನ್ನನ್ನು ಹೀಗೆನೇ ಬಿಡುವವನಲ್ಲ ಈ ಕಾಲ್ಯಾ ತಿಳಿಯಿತೇ?" ಎಂದ. ಪೋಲೀಸ್ ಅಧಿಕಾರಿ ಅವನ ಕೆನ್ನೆಗೆ ರಪ್ಪೆಂದು ಹೊಡೆದು ಸೆಳಕೊಂಡು ಹೋದನು. ನೆರೆಮನೆಯ ಹೆಂಗಸರು ಮಕ್ಕಳೆಲ್ಲಾ ಸುನೀತಳ ಮನೆಯ ಮುಂದೆ ಗುಂಪಾದರು. ಎಲ್ಲರೂ ಪ್ರಶ್ನೆ ಕೇಳುವವರೇ. ಬೇಕಾದ ಪ್ರಶ್ನೆ - ಬೇಡವಾದ ಪ್ರಶ್ನೆ ಕೂಡಾ. ಸುನೀತಳಿಂದ ತಡೆಯಲಾಗಲಿಲ್ಲ. ಒಮ್ಮೆಲೇ ಮಕ್ಕಳಂತೆ ಅತ್ತು ಬಿಟ್ಟಳು.

* * *

ವಿಲೋಭ ಮನೆಗೆ ಓಡುತ್ತೋಡುತ್ತಾ ಬಂದ. ಪೋಲೀಸರು ಅವನ ಕಾರ್ಖಾನೆಗೇನೇ ಹೋಗಿ ಅವನನ್ನು ಪೋಲೀಸ್ ಸ್ಟೇಶನಿಗೆ ಕರಕೊಂಡು ಹೋಗಿದ್ದರು. ಹೆದರಿಸಿ ಹೆದರಿಸಿ ಅವನಿಂದ ವರದಿ ಪಡೆದುಕೊಂಡಿದ್ದರು. ಅವ ಹೆದರಿ ನೀರಾಗಿ ಹೋಗಿದ್ದ. ಸುನೀತ ಚಾಪೆಯ ಮೇಲೆ ಮಲಗಿ ಕೊಂಡಿದ್ದಳು. ನೆರೆಮನೆಯ ಕೆಲವು ಹೆಂಗಸರು ಅವಳಿಗೆ ಧೈರ್ಯ ತುಂಬಲು ಪ್ರಯತ್ನಿಸುತ್ತಿದ್ದರು. ವಿಲೋಭ ಬಂದ ಕೂಡಲೇ ಅವರೆಲ್ಲಾ ತಮ್ಮ ತಮ್ಮ ಮನೆಗೆ ಹೋಗಿ ಬಿಟ್ಟರು.

(ಪುಟ 10ಕ್ಕೆ)

## 'ಜ್ಞಾನ ಪೀಠ' ಪ್ರಶಸ್ತಿ ವಿಜೇತ ಕನ್ನಡಿಗರು 5

# 'ವಿನಾಯಕರ ಭಾರತ ಸಿಂಧು ರಶ್ಮಿ ಮತ್ತು ಸಮಕಾಲೀನತೆ'

**ಕ**ವಿಯೊಬ್ಬನ ಕೃತಿಗೆ ಮಹತ್ವ ಬರುವುದು ಅದು ಎಷ್ಟರ ಮಟ್ಟಿಗೆ ಸಹಜವಾಗಿದೆ,



ಸಮಕಾಲೀನವಾಗಿದೆ ಮತ್ತು ಓದುಗನನ್ನು ಅದು ತೀವ್ರವಾಗಿ ತಟ್ಟಿ ಬಲ್ಲದೇ ಎಂಬೆಲ್ಲ ಅಂಶಗಳ ಅವಲೋಕನದಿಂದ ಒಂದು ಕಾವ್ಯ ಗಟ್ಟಿ ಕಾವ್ಯ ಎಂದು ಎಲ್ಲರ ಮೆಚ್ಚಿಗೆಗೆ ಪಾತ್ರವಾಗುವುದು ಅದರ ಸಾರ್ವತ್ರಿಕತೆಯಲ್ಲಿ, ಒಂದು ಕಾವ್ಯ ಐತಿಹಾಸಿಕ, ಪೌರಾಣಿಕ, ಸಾಮಾಜಿಕ ಯಾ ಇನ್ನಾವುದೇ ಮುಖವನ್ನು ಹೊತ್ತಿರಲಿ ಅದು ಮನುಷ್ಯನ ಬದುಕಿಗೆ ಎಷ್ಟರ ಮಟ್ಟಿಗೆ ಸ್ಪಂದಿಸುತ್ತದೆ ಎನ್ನುವುದು ನಮಗೆ ಮುಖ್ಯ. ಈ ದೃಷ್ಟಿಯಿಂದ ವಿನಾಯಕರ `ಭಾರತ ಸಿಂಧು ರಶ್ಮಿ' ಮಹಾಕಾವ್ಯವನ್ನು ಅರ್ಥೈಸುವ ಕಿರು ಪ್ರಯತ್ನ ಈ ಲೇಖನ.

ವಿನಾಯಕ ಕೃಷ್ಣ ಗೋಕಾಕರ `ಭಾರತ ಸಿಂಧು ರಶ್ಮಿ' ಮಹಾಕಾವ್ಯ `ಪುರಾಣ ಪ್ರಧಾನವಾದುದು. ಹನ್ನೆರಡು ಕಾಂಡಗಳಲ್ಲಿ ಹರವಿ ನಿಂತ ಈ ಕಾವ್ಯ ಎರಡು ಸಂಪುಟಗಳ ಸುಮಾರು 1300 ಪುಟಗಳ ಬೃಹತ್ಕೃತಿ. ಜಗತ್ತಿನ ಮಹಾಕಾವ್ಯಗಳಲ್ಲಿ ಹೆಚ್ಚಿನವು ಪುರಾಣ ಪ್ರಧಾನವಾದವು, ಅಲ್ಲಿ ಇತಿಹಾಸ ಅನುಷಂಗಿಕ ಮಾತ್ರ. ಈ ಮಾತನ್ನು ವಿನಾಯಕರ `ಭಾರತ ಸಿಂಧು ರಶ್ಮಿ'ಗೂ ಅನ್ವಯಿಸ ಬಹುದು. ವೇದ ಉಪನಿಷತ್ತು, ವಿವಿಧ ಪುರಾಣಗಳು, ಪಾಶ್ಚಾತ್ಯ ಕಾವ್ಯಗಳ ಸ್ವರೂಪ ಶೈಲಿ, ಒಂದಿಷ್ಟು ಕವಿಯ ಕಲ್ಪನೆ ಈ ಕಾವ್ಯದ ಒಡಲೊಳಗೆ ಅವಿತಿದೆ.

ವಿನಾಯಕರ ಮಹಾಕಾವ್ಯ ಪ್ರವೇಶಕ್ಕೆ ಮುನ್ನ ಒಂದು ಮಾತನ್ನು ನಾನಿಲ್ಲಿ ಹೇಳಲೇ ಬೇಕಾಗಿದೆ. ಆಧುನಿಕ ಕನ್ನಡ ವಾಙ್ಮಯದಲ್ಲಿ ಪುರಾಣಗಳ ಪುನರಾವರ್ತನೆಯಾಗಿದೆ. ವಿಭಿನ್ನ ದೃಷ್ಟಿಕೋನಗಳಿಂದ ಅವುಗಳನ್ನು ಬಳಸಿಕೊಂಡು ಪುರಾಣ ನೂತನವನ್ನಾಗಿ ಮಾಡುವ ಪ್ರಯತ್ನ ನಡೆದಿದೆ. ಆದರೂ ನಮ್ಮ ವಿಮರ್ಶಕ ವರ್ಗ ಪುರಾಣ ಸಂಬಂಧ ವಿಷಯವನ್ನು ಗಂಭೀರವಾಗಿ ಪರಿಗಣಿಸಿಲ್ಲ. ಪುರಾಣ ದೇವ ದೈವತಗಳಿಗೆ ಸಂಬಂಧಿಸಿದ ಕತೆ ಎಂಬುದರಲ್ಲಿ ಎರಡು ಮಾತಿಲ್ಲ, ಆದರೂ ಪುರಾಣದ ದೇವತೆಗಳು ಮನುಷ್ಯ ಮಾತ್ರರಂತೆ ನಡೆದು ಕೊಳ್ಳುತ್ತಾರೆ. ನಮಗಿರುವ ಎಲ್ಲ ರಾಗ - ದ್ವೇಷ - ಆಸೆ - ಆಮಿಷ, ಮತ್ಸರ ಮತ್ತೊಂದು ಮೊಗದೊಂದರಿಂದ ಅವರು ಹೊರತಾಗಿಲ್ಲ. ಅತಿಮಾನುಷ, ಅಮಾನುಷ, ಅತೀಂದ್ರಿಯಮಯವಾಗಿದ್ದಾಗ್ಯೂ ಪುರಾಣಗಳು ನಮ್ಮ ಪೂರ್ವಜರ, ಆದಿಮ ಜನರ ವಿಕಾಸದ ವಿವಿಧ ಹಂತಗಳನ್ನು ಅವರ ಸೋಲು ಗೆಲುವುಗಳನ್ನು ಸಾದರ ಪಡಿಸುತ್ತವೆ. ನಿನ್ನಿನ ಅನುಭವದ ಮೇಲೆ ಇವತ್ತಿನ ಪ್ರಪಂಚ ನಿಂತಿದೆ. ಆದ್ದರಿಂದ ಪುರಾಣ ಪ್ರಧಾನವಾದ `ಭಾರತ ಸಿಂಧು ರಶ್ಮಿ' ಮಹಾಕಾವ್ಯ ವೇದಕಾಲೀನ ಜನಪದದ ಬದುಕನ್ನು ಬಹು ಸೂಕ್ಷ್ಮವಾಗಿ ಚಿತ್ರಿಸಿದೆ.

ವೈದಿಕ ಸಾಹಿತ್ಯ ಪುರಾಣ, ಇತಿಹಾಸಗಳ ಆಳವಾದ ಅಧ್ಯಯನದ ನೆಲೆಯೊಂದಿಗೆ ವೇದಕಾಲೀನ ಸಂಕೀರ್ಣ ಯುಗವೊಂದರ ರಾಜಕೀಯ ಸಾಮಾಜಿಕ ಸೂಕ್ಷ್ಮ ಸಂದರ್ಭಗಳನ್ನು ವಿಶ್ವಾಮಿತ್ರನ ಬದುಕಿನ ಹಿನ್ನೆಲೆಯಲ್ಲಿ ತೂಗಿ ನೋಡುವ ಪ್ರಯತ್ನವನ್ನು ಕವಿ ಇಲ್ಲಿ ಮಾಡಿದ್ದಾರೆ.

ವಿಶ್ವಾಮಿತ್ರನೇ ಇಲ್ಲಿಯ ಕಥಾನಾಯಕ. ಆತ ಕಾವ್ಯದ ಕೇಂದ್ರ ಬಿಂದು. ಇವನ ಸುತ್ತ ನೂರಾರು ಕಥೆಗಳು, ಉಪಕಥೆಗಳು ಸುತ್ತಿಕೊಂಡಿದೆ. ವಿಶ್ವರಥ (ವಿಶ್ವಾಮಿತ್ರನ ಮೊದಲ ಹೆಸರು) ವಿಶ್ವಮಿತ್ರನಾಗಿ ರೂಪುಗೊಂಡ ಬೃಹತ್ಕಥೆ ಇಲ್ಲಿದೆ. ವಿಶ್ವರಥ

### ಡಾ| ವಿನಾಯಕ ಕೃಷ್ಣ ಗೋಕಾಕ

[1909 - 1992]

`ವಿನಾಯಕ' ಎಂಬ ಕಾವ್ಯ ನಾಮದಿಂದ ಸಾಹಿತ್ಯ ರಚಿಸಿದ ಗೋಕಾಕರು ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳಲ್ಲಿ ಒಬ್ಬರು. ಕವಿಯಾಗಿ, ವಿಮರ್ಶಕರಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ, ಪ್ರಬಂಧ ಪ್ರವಾಸ ಕಥನಕಾರರಾಗಿ ಅವರ ಬರವಣಿಗೆ ವಿಪುಲವಾಗಿದೆ. ಮೊದಲು ಇಂಗ್ಲೀಷ್‌ನಲ್ಲಿ ಕಾವ್ಯ ರಚಿಸಿದ ಗೋಕಾಕರು ಧಾರವಾಡದಲ್ಲಿ ಬೇಂದ್ರೆ ಹಾಗೂ `ಗೆಳೆಯರ ಗುಂಪಿನ' ಸಂಪರ್ಕದಿಂದಾಗಿ ಕನ್ನಡದಲ್ಲಿ ಸಾಹಿತ್ಯ ರಚನೆಗೆ ತೊಡಗಿದರು. ``ಕೊಡದಿರು ಶರಧಿಗೆ ಪಟ್ಟದಿಯ ದೀಕ್ಷೆಯನು" ಎಂಬ ನವ್ಯದ ದಿವ್ಯ ಮಂತ್ರ ಉದ್ಘರಿಸಿದ ಗೋಕಾಕರು ನವ್ಯದ ಹರಿಕಾರರಾಗಿದ್ದಾರೆ. ಅರವಿಂದರ ಶಾಶ್ವತ ಚಿಂತನೆ, ಸತ್ಯಸಾಯಿಯ ಧರ್ಮ ಜಿಜ್ಞಾಸೆಯ ಸಾರವತ್ತಾದ ಆಲೋಚನೆಗಳನ್ನು ಅಳವಡಿಸಿಕೊಳ್ಳುತ್ತಲೇ ಪಶ್ಚಿಮದ ವಿಚಾರಧಾರೆಯನ್ನು ಪುರಸ್ಕರಿಸಿ ಸಮನ್ವಯ ಸಾಧಿಸಿಕೊಂಡಿದ್ದ ವಿನಾಯಕರಿಗೆ ಸಾಮರಸ್ಯ ಜೀವನ ಸಿದ್ಧಾಂತದ ಸಾರ.

``ಮಹಾಕಾವ್ಯ ಯಾವುದಾಗಬಹುದು?"

``ಮಹಾಕಾವ್ಯ ಎಲ್ಲ ರಚನೆಗಳೂ ಒಂದೇ ಕೃತಿಯಲ್ಲಿ ಕಾಣಬರದಿದ್ದರೂ ಗಾತ್ರದಲ್ಲಿ ಹಿರಿದಾಗಿದ್ದು ಗುಣಮಟ್ಟದ ಹಿರಿಮೆಯನ್ನು ಗರಿಮೆಯನ್ನು ಹಾಗೂ ಸಮಕಾಲೀನ ಸ್ಥಿತಿಯನ್ನು ಮೀರಿ ನಿಲ್ಲ ಬಹುದಾದ ಕೃತಿ ಮಹಾಕಾವ್ಯವಾಗಬಹುದು."

``ಸಾಹಿತ್ಯದಲ್ಲಿ ವಾಸ್ತವಿಕತೆ, ಪರಂಪರೆ ಹಾಗೂ ಆಧುನಿಕತೆಯ ಪಾತ್ರ ಹೇಗಿರಬೇಕು?"

``ಕಥಾ ವಸ್ತುವಿಗೆ ತಕ್ಕ ವಾಸ್ತವಿಕತೆ, ತಂತ್ರ, ಶಬ್ದ ಚಿತ್ರಣ ಪರಂಪರೆಯ ಹಿನ್ನೆಲೆ ಹಾಗೂ ಆಧುನಿಕತೆಯ ಒಲವು ಮೂಡಿ ಬರುವ ಅಂಶಗಳಿರಬೇಕು. ಈ ಅಂಶಗಳು ಸಾಹಿತಿಯ ಮನೋಭಾವ, ಪರಿಸರ ಹಾಗೂ ಆದರ್ಶ ಮೌಲ್ಯಗಳನ್ನು ಅವಲಂಬಿಸಿರುತ್ತವೆ.

ಕನ್ನಡ ವಿಮರ್ಶೆ ಸಾಹಿತ್ಯ ಸಮಾಧಾನ ಉಂಟು ಮಾಡಿದೆಯೇ?

ಕನ್ನಡ ಸಾಹಿತ್ಯ ಬೆಳೆದು ಬಂದ ವಿಸ್ತಾರ ಬಹುಮುಖಿ ಒಲವುಗಳನ್ನು ಗಮನಿಸಿದರೆ ವಿಮರ್ಶೆ ಪ್ರಮಾಣದಲ್ಲಿ ಬೆಳೆದಿಲ್ಲ. ಇತ್ತೀಚಿನ ವಿಮರ್ಶೆಯಲ್ಲಿ ವಿಷಾದ ಅಂಶಗಳು ಹೆಚ್ಚು. ವಿಮರ್ಶೆ ವಸ್ತು ನಿಷ್ಠವಾಗಿರುವುದು ಅವಶ್ಯ. ಒಲವು ವಿಮರ್ಶಕರಿಗೆ ವಿಮರ್ಶೆಯ ವಿಭಾವ ಗೊತ್ತಿಲ್ಲ, ಕೃತಿ ನಿಷ್ಠೆ ವಿಮರ್ಶೆ ಆರೋಗ್ಯಕರ. ವಿಮರ್ಶೆಯಲ್ಲಿ Favouritism, Personal Prejudice ಕೂಡದು. ವಿಕೃತ ವಿಮರ್ಶೆ ಸಲ್ಲದು".

*[1991 ಸೆಪ್ಟೆಂಬರ್ 'ನೇಸರು' ಗಾಗಿ ಗೋಕಾಕ್‌ರೊಂದಿಗೆ ನಡೆದಿದ್ದ ಸಂದರ್ಶನದಿಂದ]*

ವಿಶ್ವಾಮಿತ್ರನಾದುದು. ಬ್ರಹ್ಮರ್ಷಿಯಾದುದು ಸಾಮಾನ್ಯ ಘಟನೆಯಲ್ಲ. ಅದಕ್ಕಾಗಿ ಆತ ಪಟ್ಟಪಾಡು, ಮಾಡಿದ ಹೋರಾಟ, ಆತನ ಸೋಲುಗೆಲುವುಗಳು ಅವನ ಸುತ್ತಣ ಪ್ರಪಂಚ ಇವೆಲ್ಲವನ್ನು ವರ್ಣನಾತ್ಮಕವಾಗಿ ವಿನಾಯಕರು ಚಿತ್ರಿಸಿದ್ದಾರೆ. ಈ ಕಾವ್ಯದ ಯಶಸ್ಸು ಎರಡು ರೀತಿಯದು. ಒಂದು, ಪುರಾಣ ಜನಪದ ಬದುಕನ್ನು ನಮ್ಮ ಸಮಕಾಲೀನ ಬದುಕಿನೊಂದಿಗೆ ತೂಗಿ ನೋಡುವುದು. ಎರಡು, ಆಧುನಿಕ ಮಾನವನ ಬದಲಾದ ಪ್ರವೃತ್ತಿಗೆ ಕಾರಣಗಳನ್ನು ಅವನು ನಡೆದು ಬಂದ ದಾರಿಯಲ್ಲಿ, ಅಂದರೆ ವರ್ತಮಾನದ ದೋಷವನ್ನು ಭೂತದ ಬೆಳಕಿನಲ್ಲಿ ಕಾಣುವುದು. ಹಾಗೆಂದು ಕವಿ ಹಳೆಯ ಪರಂಪರೆಯಲ್ಲಿ ಮುಳುಗಿ ಏಳುತ್ತಾರೆಂದಲ್ಲ. ಅಲ್ಲಿನ ದೋಷವನ್ನೂ ಎತ್ತಿ ಹೇಳಿ ಅದನ್ನು ಇವತ್ತಿನ ಬದುಕಿನಲ್ಲಿ ಹೀಗೆ ಅಳವಡಿಸಿಕೊಳ್ಳಬಹುದೆಂಬ ಚಿಕಿತ್ಸಕ ದೃಷ್ಟಿಕೋನವೂ ಇಲ್ಲಿದೆ. ವೇದಕಾಲೀನ ಇತಿಹಾಸದಲ್ಲಿನ ಹಲವಾರು ಲೋಪದೋಷಗಳನ್ನು ಬಹು ಜಾಣ್ಮೆಯಿಂದ ಕವಿ ಇಲ್ಲಿ ನಿವಾರಿಸಿ ಇವತ್ತಿಗೂ ಒಪ್ಪಿಕೊಳ್ಳುವಂತೆ ಮಾಡಿದ್ದಾರೆ.

ಮೊದಲು ಆರ್ಯ-ದಸ್ಯುಗಳು ತೀರಾ ವೈರಿಗಳಾಗಿದ್ದರು. ಅನಂತರ ಮಿಶ್ರ ಸಂಸ್ಕೃತಿ ರೂಪುಗೊಂಡಿತು. ಆದ್ದರಿಂದ ವಿಶ್ವಾಮಿತ್ರನನ್ನು ಅವನ ತಾಯಿ ಊರ್ವಿದೇವಿ `ನೀನು ಸಂಕೀರ್ಣತೆಯ ಆರಾಧಕನು ಕಂದ' ಎನ್ನುತ್ತಾಳೆ. ವರ್ಣಸಂಕರದಿಂದ ಒಳ್ಳೆಯದೇ ಆಯಿತು ಎನ್ನುತ್ತಾ ``ವರ್ಣಸಂಕರದಿಂದ ಉದಿಸುತಿಹ ಸಂಕೀರ್ಣ ಸಂಸ್ಕೃತಿಯೊಳೊಂದು ಹೊಸ ಹಿರಿಮೆ ಇದೆ" ಎನ್ನುತ್ತಾರೆ. ವಿಶ್ವರಥನ ಹುಟ್ಟು ಸಹ ಮಿಶ್ರಣದಿಂದಲೇ ಆಗುತ್ತದೆ. ಕನ್ಯಾಕುಬ್ಜದ ದೊರೆ ಗಾಧಿ. ಅವನ ಪತ್ನಿ ಊರ್ವಿದೇವಿ, ಪುತ್ರಿ ಸತ್ಯವತಿ, ಅಳಿಯ ಋಚೀಕ. ಊರ್ವಿದೇವಿಗೆ ಗಂಡು ಸಂತಾನವಿರಲಿಲ್ಲ. ಸತ್ಯವತಿಗೂ ಗಂಡು ಮಗು ಬೇಕೆಂಬ ಬಯಕೆ. ಅದಕ್ಕಾಗಿ ಋಚೀಕ ಪಾಯಸ ಮಂತ್ರಿಸಿ ಕೊಡುತ್ತಾನೆ. ಆದರೆ ಅವರಿಬ್ಬರೂ ಅದನ್ನು ಬದಲಾಯಿಸಿ ಕೊಳ್ಳುತ್ತಾರೆ. ಇದರಿಂದಾಗಿ ಬ್ರಹ್ಮತೇಜಸ್ಸುಳ್ಳ ವಿಶ್ವರಥ ಕ್ಷಾತ್ರ ಗರ್ಭದಲ್ಲೂ, ಕ್ಷಾತ್ರ ತೇಜಸ್ಸುಳ್ಳ ಪರಶುರಾಮ ಬ್ರಹ್ಮ ಗರ್ಭದಲ್ಲೂ, ಜನಿಸುತ್ತಾರೆ. ವಿಶ್ವರಥ ಪ್ರಾಯಕ್ಕೆ ಬಂದಾಗ ಅವನ ತಂದೆ ಗಾಧಿರಾಜ ಮಗನಿಗೆ ಪಟ್ಟಕಟ್ಟಲು ಪ್ರಯತ್ನಿಸಿರುತ್ತಾನೆ. ಆದರೆ ವಿಶ್ವರಥ ಅದಕ್ಕೂ ಮೊದಲು ಸಪ್ತ ಸಿಂಧೂ ದೇಶವನ್ನು ಸುತ್ತಿ ಬರುವುದಾಗಿ ಇಚ್ಛಿಸಿ ಸಂಚಾರ ಹೊರಡುತ್ತಾನೆ. ಮಿಶ್ರ ರಕ್ತದ ಸಾಂಕೃತಿಯನ್ನು ಈ ಮಧ್ಯೆ ಪ್ರೀತಿಸುತ್ತಾನೆ. ಅನಂತರ ಆಕೆಯನ್ನು ಮದುವೆಯಾಗುತ್ತಾನೆ.

ವೇದಕಾಲದ ಸಮಾಜದ ಜಾತಿ ವ್ಯವಸ್ಥೆಯ ಬಗ್ಗೆ ಕವಿಯ ಅಭಿಪ್ರಾಯವಿದು:

``ಗುಣಗಣನೆಯಿಂದಾಯ್ತು ಚತುರ್ ವರ್ಣ ವ್ಯವಸ್ಥೆ
ಬೆನ್ನು ಕಟ್ಟಿತು ತನ್ನ ಹುಟ್ಟಿಂದೆಸೆಯಲಿಲ್ಲ
ವ್ಯಕ್ತಿಯಾಗುತ ಬ್ರಹಮವಿದ, ಕ್ಷತ್ರಿಯ, ವೈಶ್ಯ,
ಶೂದ್ರ ಮಕ್ಕಳಿದ್ದಿಹರು
ಗುಣದಂತೆ ವರ್ಣ - ಜನ್ಮದೊಲಲ್ಲ".

- (1; xviii)

ಹುಟ್ಟಿನಿಂದ ಯಾರು ಶ್ರೇಷ್ಠರಾಗುವುದಿಲ್ಲ, ವ್ಯಕ್ತಿ ತನ್ನ ಗುಣಾವಗುಣಗಳಿಂದ ಅಂತಾಗುತ್ತಾನೆ ಎಂಬ ವಚನಕಾರರ ಮಾತನ್ನು ಇಲ್ಲಿ ಸಮರ್ಥಿಸುತ್ತಾರೆ. ಹೇಗೆ ಸಮಾನತೆ, ಸರ್ವ ಧರ್ಮ ಸಮನ್ವಯ ಗುಣ ರೂಢಿಗೆ ಬಂದಿತೆಂಬುದನ್ನು ತಿಳಿಸಿದ್ದಾರೆ. ``ಜನಾಂಗಗಳೆರಡು ಆರ್ಯದಸ್ಯುಗಳೆಂದು ಸಂಗ್ರಾಮಿಸುತ ಮುಂದೆ ಸಂಗಮಿಸುವ ಕ್ರೈವಾಡ. ಮೂಲ ಸಂಸ್ಕೃತಿ ಮಥನ ಮಲೆತವು ಮುಂದೆ ಕಲೆತರೀ ನಾನಾ ವರ್ಣ ನಾನಾ ರೀತಿ ನೀತಿಗಳನು" ಎಂದಿದ್ದಾರೆ. ವೇದಕಾಲೀನ ಜಾತಿ ವ್ಯವಸ್ಥೆ, ವರ್ಣಸಂಕರ, ಭೇದಭಾವ,

**ಗೋಕಾಕರಿಗೆ ಸಂದಿದ್ದ ಪದವಿ ಪ್ರಶಸ್ತಿಗಳು:-**

- 1961 - 'ಪದ್ಮಶ್ರೀ' ಪ್ರಶಸ್ತಿ ಪ್ರಧಾನ
- 1962 - 'ದ್ಯಾವಾ ಪೃಥಿವೀ'ಗೆ ಸಾಹಿತ್ಯ ಅಕಾಡೆಮಿಯ ಪುರಸ್ಕಾರ
- 1966 - ಬೆಂಗಳೂರು ವಿಶ್ವ ವಿದ್ಯಾಲಯದ ಉಪ-ಕುಲಪತಿಗಳಾಗಿ ನೇಮಕ
- 1966 - ಕರ್ನಾಟಕ ವಿಶ್ವ ವಿದ್ಯಾಲಯದಿಂದ ಗೌರವ ಡಾಕ್ಟರೇಟ್
- 1971 - ಪ್ಯಾಸಿಫಿಕ್ ಯೂನಿವರ್ಸಿಟಿ, ಕ್ಯಾಲಿಫೋರ್ನಿಯಾ ಯು.ಎಸ್.ಎ. ಯಿಂದ ಗೌರವ ಡಾಕ್ಟರೇಟ್
- 1977 - ಭಾರತೀಯ ಜ್ಞಾನಪೀಠ ಪ್ರಶಸ್ತಿ ಆಯ್ಕೆ ಮಂಡಳಿಯ ಅಧ್ಯಕ್ಷರು
- 1978 - ಕೇಂದ್ರ ಸಾಹಿತ್ಯ ಅಕಾಡೆಮಿ, ಉಪಾಧ್ಯಕ್ಷರು
- 1980 - ಭಾಷಾ ಸಮಿತಿ ಅಧ್ಯಕ್ಷರು (ಗೋಕಾಕ ವರದಿ)
- 1981 - ಸತ್ಯಸಾಯಿ ಸ್ವೀಕೃತ ವಿಶ್ವ ವಿದ್ಯಾಲಯದ ಕುಲಪತಿ
- 1982 - ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು
- 1991 - ಭಾರತೀಯ ಜ್ಞಾನಪೀಠ ಪ್ರಶಸ್ತಿ (ಭಾರತ ಸಿಂಧು ರಶ್ಮಿ ಮಹಾಕಾವ್ಯಕ್ಕೆ)

ಉಚ್ಚ ನೀಚನೆಂಬೆಲ್ಲ ಅಂಶಗಳನ್ನು ವಿನಾಯಕರು ಬಹು ಸೊಗಸಾಗಿ ಅರ್ಥೈಸಿದ್ದಾರೆ. ಭಾರತ ಸಿಂಧು ರಶ್ಮಿಯ ಯಶಸ್ಸು ಇಂಥ ಸಂದರ್ಭಗಳನ್ನು ನಿಭಾಯಿಸುವ ಕವಿಯ ಜಾಣ್ಮೆಯಲ್ಲಿ ವ್ಯಕ್ತವಾಗುತ್ತದೆ.

ವಿಶ್ವರಥನ ಸಪ್ತ ಸಿಂಧೂ ದೇಶದ ಯಾತ್ರೆಗೆ ಅರ್ಧದಷ್ಟು ಕಾವ್ಯ ಮೀಸಲಾಗಿದೆ. ದಾರಿಯಲ್ಲಿ ದಸ್ಯುರಾಜ ಅಭೀರುವನ್ನು ಹುಲಿಯಿಂದ ಬಚಾವ ಮಾಡಿ ಅವನ ಸ್ನೇಹ ಗಳಿಸುತ್ತಾನೆ. ಸಂಬಂಧಿಗಳಾದ ಸುದಾಸ, ದಿವೋದಾಸರ ಪರಿಚಯವಾಗುತ್ತದೆ. ಸತ್ಯರಥನಿಗೆ ಬಂದ ತಾಪತ್ರಯವನ್ನು ದೂರ ಮಾಡುವುದಾಗಿ ತಿಳಿಸುತ್ತಾನೆ. ತಂದೆಯ ಮರಣಾನಂತರ ಸಾಂಕೃತಿಯನ್ನು ಮದುವೆಯಾಗುತ್ತಾನೆ. ಸುದಾಸನ ಮದುವೆಯ ಸಂದರ್ಭ ಒಂದು ಮಹತ್ವದ ಘಟನೆ. ಮದುವೆ ಮುಗಿಸಿಕೊಂಡು ಬರುವಾಗ ವಸಿಷ್ಠರ ಆಶ್ರಮಕ್ಕೆ ಭೇಟಿ ಕೊಡುತ್ತಾನೆ. ಅಲ್ಲಿ ವಸಿಷ್ಠರ ಉಪಚಾರವನ್ನು ಕಂಡು ವಿಶ್ವರಥ ಆಶ್ಚರ್ಯಗೊಳ್ಳುತ್ತಾನೆ. ಇದೆಲ್ಲದಕ್ಕೂ ಕಾಮಧೇನುವೇ ಕಾರಣವೆಂದು ಗೊತ್ತಾಗಿ ತನಗೆ ಅದನ್ನು ಕೊಡುವಂತೆ ಅವರಲ್ಲಿ ಕೇಳುತ್ತಾನೆ. ವಸಿಷ್ಠರು ಸಮ್ಮತಿಸದೇ ಹೋದಾಗ ಕುಪಿತನಾಗಿ ಅವರ ಮೇಲೆ ಕೈ ಮಾಡಹೋಗಿ ಸೋತು ಮನಸ್ಥಿತಿ ಕೆಡಿಸಿಕೊಂಡು ಮರಳುತ್ತಾನೆ. ರಾಜ್ಯದ ಸಮಸ್ತ ಜವಾಬ್ದಾರಿಯನ್ನು ಸಾಂಕೃತಿಗೊಪ್ಪಿಸಿ ತಪಸ್ಸಿಗೆ ತೆರಳುತ್ತಾನೆ. ಅಲ್ಲಿಯೂ ಮನೋವ್ಯಾಧಿ ಕಡಿಮೆಯಾಗದೇ ನಗ್ನ ಸುಂದರಿಯೊಬ್ಬಳನ್ನು ಕಾಣುತ್ತಾನೆ. ಇಂದ್ರ ಮೇನಕೆಯನ್ನು ಕಳುಹಿಸುತ್ತಾನೆ. ಆಕೆಯನ್ನು ನೀನು ನನ್ನ ತಾಯಿಗೆ ಸಮಾನ ಎನ್ನುತ್ತಾನೆ. ಮುಂದೆ ಮನಸ್ಸನ್ನು ಹತೋಟಿಯಲ್ಲಿಟ್ಟು ಕೊಂಡು ಗಾಯತ್ರಿ ಮಂತ್ರದ ದ್ರಷ್ಟಾರನಾಗುತ್ತಾನೆ.

ವಿಶ್ವಾಮಿತ್ರ, ಗೆಳೆಯ ಸತ್ಯರಥ (ತ್ರಿಶಂಕು) ಮಾಡಿದ ಉಪಕಾರದ ಋಣ ತೀರಿಸಲು ಅಸಾಧ್ಯವಾದ ಸಾಹಸಕ್ಕೆ ಕೈ ಹಚ್ಚುತ್ತಾನೆ. ಸದೇಹದಿಂದ ಸ್ವರ್ಗ ಸೇರುವುದು ಅಸಾಧ್ಯ ಎಂಬ ಅಂಶ ಗೊತ್ತಿದ್ದರೂ ``ತ್ರಿವಿಕ್ರಮನ ತ್ರಿಪದ - ತ್ರಿಶಂಕು ಪ್ರಶ್ನೆಗೆ ಉತ್ತರ ಧಾರೆಯೆರೆವೆನು ತಪೋಬಲ ಸರ್ವಸಿದ್ಧಿಗಳನ್ನು ನಿನ್ನೆದೆಯ ಹಂಬಲದ ಮಿಡಿಗಾಯಿ ಮಾಗಲೆಂದು" - (2-505) ಯಜ್ಞಪ್ರಾರಂಭಿಸುತ್ತಾರೆ. ಮೊದಮೊದಲು ಸತ್ಯವ್ರತನಿಗೆ ಎಲ್ಲವೂ ಸೊಗಸಾಗಿಯೇ ಕಂಡಿತು. ಸ್ಮೃತಿ, ಬುದ್ಧಿ, ಕಲ್ಪನಾ ಲೋಕದಲ್ಲಿ ವಿಹರಿಸುತ್ತಾನೆ. ಕ್ರಮೇಣ ಅದೇ ಯಮಯಾತನೆ ಅನಿಸುತ್ತದೆ. ``ಸತ್ಯ ಸೌಂದರ್ಯಗಳ ತಾಯಾದ ನೆಲವ ತೊರೆದು ಅಸತ್ಯನು ಆದ್ಯಂತ ಶೋಧಿಸಲೇನು ಫಲವು?

(ಪುಟ 13ಕ್ಕೆ)

ಸಂದರ್ಶನ:

# ಮಿಸ್ ಕರ್ನಾಟಕ ಸ್ಪರ್ಧೆಯ ಸಂಯೋಜಕಿ ಹಾಗೂ ಸ್ಪರ್ಧೆಯ ವಿಜೇತರೊಡನೆ ಮಾತುಕತೆ

● ರೇಖಾ

**ಜೂನ್** 15 ಶನಿವಾರದಂದು ಕರ್ನಾಟಕ ಸಂಘದಲ್ಲಿ ಮಿಸ್ ಕರ್ನಾಟಕ ಸ್ಪರ್ಧೆ ನಡೆಯಿತು. ಮುಂಬೈ ಕನ್ನಡಿಗರ ಮಟ್ಟಿಗೆ ಇದೊಂದು ಅಪೂರ್ವ ಪ್ರಯೋಗ. ಸೌಂದರ್ಯದ ಕಲ್ಪನೆ ಈಚಿನ ದಿನಗಳಲ್ಲಿ



ಮಿಸ್ ಕರ್ನಾಟಕ ಐಶ್ವರ್ಯ ಶೆಟ್ಟಿ. ಅವರ ಎಡದಲ್ಲಿ ಮೊದಲ ರನ್ನರ್ ಅಪ್ ಶ್ರೇಯಾ ರಾವ್, ಬಲದಲ್ಲಿ ಎರಡನೇ ರನ್ನರ್ ಅಪ್ ಗೌರಿ ಎಳವಟ್ಟಿ.

ಕಮಲದಂತಹ ಮುಖ, ಮೀನಿನಂತಹ ಕಣ್ಣುಗಳು, ಸಂಪಿಗೆಯಂತಹ ನಾಸಿಕ, ದುಂಬಿಗಳಂತಹ ಮುಂಗುರುಳು... ಈಯೆಲ್ಲವನ್ನು ಮೀರಿದೆ. ಸುಂದರವಾದ ಮುಖ, ಪ್ರಮಾಣಬದ್ಧವಾದ ದೇಹದೊಂದಿಗೆ ಆಕರ್ಷಿತ ಉಡುಗೆ-ತೊಡುಗೆ: ಒನಪು ಒಯ್ಯಾರದ ನಡೆ: ಬುದ್ಧಿವಂತಿಕೆಯಿಂದ ಕೂಡಿದ ಚುರುಕಾದ ನುಡಿ ಮೊದಲಾದವುಗಳು ಸೌಂದರ್ಯಕ್ಕೆ ಪೂರಕವೆನಿಸಿದೆ. 18 ರಿಂದ 25 ವರ್ಷಗಳವರೆಗಿನ 13 ಸುಂದರಿಯರು ಭಾಗವಹಿಸಿದ ಈ ಅಂತಿಮ ಸ್ಪರ್ಧೆಯನ್ನು ಚಿತ್ರತಾರೆ ಶ್ರೀಮತಿ ಬಿ. ಪ್ರಭ ಅವರು ಉದ್ಘಾಟಿಸಿದರು. ಶ್ರೀಮತಿ ಸುಗಂಧ ಹಿರೇಮಠ್: ಶ್ರೀ ಅನಿಲ್ ರಾವ್ ಹಾಗೂ ಶ್ರೀ ಅಶೋಕ್ ಹಿರೇಮಠ್ ತೀರ್ಪುಗಾರರಾಗಿದ್ದರು. ಮಿಸ್ ಕರ್ನಾಟಕ ಆಗಿ ಕುಮಾರಿ ಐಶ್ವರ್ಯ ಶೆಟ್ಟಿ: ಮೊದಲ ರನ್ನರ್ ಅಪ್ ಆಗಿ ಕುಮಾರಿ ಶ್ರೇಯಾ ರಾವ್ ಮತ್ತು ಎರಡನೆ ರನ್ನರ್ ಅಪ್ ಆಗಿ ಕುಮಾರಿ ಗೌರಿ ಎಳವಟ್ಟಿ ಆಯ್ಕೆಯಾದರು.

ಶ್ರೀಮತಿ ವಿಜಯಾ ಹಿರೇಮಠ್ ಮತ್ತು ಶ್ರೀಮತಿ ರೇಖಾ ಶಶಿಧರ್ ಅವರ ಪರಿಶ್ರಮ ಒಂದು ಯಶಸ್ವಿ ಪ್ರಯೋಗವಾಗಿ ಮೂಡಿಬಂತು. ಸ್ಪರ್ಧೆಯ ಬಗ್ಗೆ ಒಂದಷ್ಟು ಮಾಹಿತಿಯನ್ನು `ನೇಸರು'ಗಾಗಿ ಪಡೆಯಲು ಕರ್ನಾಟಕ ಸಂಘದಲ್ಲಿ ಇವರಿರ್ವರನ್ನು ಭೇಟಿಯಾಗಿದ್ದೆ. ಸಂದರ್ಶನ ಬಹುಮಟ್ಟಿಗೆ ಶ್ರೀಮತಿ ರೇಖಾರವರೊಂದಿಗೆ ನಡೆದದ್ದು. ನಂತರ ಶ್ರೀಮತಿ ವಿಜಯಾ ಅವರೂ ನಮ್ಮೊಂದಿಗೆ ಸೇರಿಕೊಂಡರು.

**ಸ್ಪರ್ಧೆ ಏರ್ಪಡಿಸಲು ನಿಮಗಿದ್ದ ಪ್ರೇರಣೆಗಳೇನು?**

*ಸಂಘದ ಚಟುವಟಿಕೆಗಳಲ್ಲಿ ಹಿರಿಯರು ಭಾಗವಹಿಸುವಂತೆ ಯುವ ಜನರು ಭಾಗವಹಿಸುತ್ತಿರಲಿಲ್ಲ. ಅವರನ್ನು ಆಕರ್ಷಿಸಿ ಸಂಘದತ್ತ ಗಮನ ಸೆಳೆಯುವುದು ಮತ್ತು ನಮ್ಮಲ್ಲಿರುವ ಪ್ರತಿಭೆಗಳಿಗೆ ಅವಕಾಶ ನಿರ್ಮಿಸಿ ಪ್ರೋತ್ಸಾಹ ಕೊಡಬೇಕೆಂಬ ಉದ್ದೇಶದಿಂದ ಈ ಸ್ಪರ್ಧೆ ಏರ್ಪಡಿಸಿದ್ದು. ಮುಂಬಯಿಯ ಎಲ್ಲಾ ಕನ್ನಡಿಗರನ್ನು ಒಟ್ಟಾಗಿ ಸೇರಿಸುವ ಯತ್ನವೂ ಇದಾಗಿತ್ತು.*

**ಇದಕ್ಕಾಗಿ ಸಾಕಷ್ಟು ಪೂರ್ವಭಾವಿ ಸಿದ್ಧತೆಗಳು ನಡೆದಿರಬೇಕಲ್ಲವೇ?**

*ಮಾರ್ಚ್ ತಿಂಗಳಲ್ಲಿ ಈ ಬಗ್ಗೆ ಪ್ರಕಟಣೆ ಹೊರಡಿಸಿದ್ದು, ಮುಂಬೈನ ಎಲ್ಲಾ ಕರ್ನಾಟಕ ಸಂಘಗಳಿಗೆ ಕಾಗದಗಳನ್ನು ಬರೆದದ್ದು, ಮಹಾರಾಷ್ಟ್ರವಿಡೀ ಪತ್ರ ಪತ್ರಿಕೆಯಲ್ಲಿ ಈ ಸ್ಪರ್ಧೆಗೆ ಪ್ರವೇಶಿಸಲು ಕರೆಕೊಟ್ಟು, ಸ್ಪರ್ಧೆಗೆ ಸಾಕಷ್ಟು ಹಣ ಖರ್ಚಾಗುತ್ತಿದ್ದರಿಂದ ಪ್ರಾಯೋಜಕರನ್ನು ಸಂಪರ್ಕಿಸಿದ್ದು.*

**ನೀವು ನಿರೀಕ್ಷಿಸಿದ ಪ್ರತಿಕ್ರಿಯೆ ಸಿಕ್ಕೇ?**

*ಮೊದಲಿಗೆ ಸ್ಪರ್ಧಿಸಲು ಯಾರೂ ಮುಂದಾಗಲಿಲ್ಲ. ಕ್ರಮೇಣ 25 ಪ್ರವೇಶ ಪತ್ರಗಳು ಬಂತು. ಇನ್ನು ಪ್ರಾಯೋಜಕರ ಮಟ್ಟಿಗೆ ಹೇಳುವುದಾದರೆ ಕೆಲವು ಪ್ರಸಿದ್ಧ ಜವಳಿ ವ್ಯಾಪಾರಸ್ಥರನ್ನು ಬಹುಮಾನಗಳಿಗಾಗಿ ಸಂಪರ್ಕಿಸಿದ್ದು. ನಾವು ನಿರೀಕ್ಷಿಸಿದಂತೆ ಆ ರೀತಿಯ ಸಹಕಾರ ನಮಗೆ ಸಿಗಲಿಲ್ಲ.*



ಶ್ರೀಮತಿ ವಿಜಯಾ ಹಿರೇಮಠ್‌ರವರು ಮಿಸ್ ಕರ್ನಾಟಕ ಐಶ್ವರ್ಯ ಶೆಟ್ಟಿಯವರಿಗೆ ಕಿರೀಟ ತೊಡಿಸುತ್ತಿರುವುದನ್ನು ಶ್ರೀಮತಿ ರೇಖಾ ಶಶಿಧರ್ ವೀಕ್ಷಿಸುತ್ತಿದ್ದಾರೆ.

**Elimination roundಗಳಿತ್ತಾ? ಅಂತಿಮ ಸ್ಪರ್ಧೆಗಳನ್ನು ಹೇಗೆ ಆಯ್ಕೆ ಮಾಡಿದ್ರಿ?**

ಪ್ರವೇಶ ಪತ್ರದೊಂದಿಗೆ ಬಂದಿದ್ದ ಸ್ಪರ್ಧಿಗಳ Photoಗಳಿಂದ ಒಂದಿಷ್ಟು ಜನರನ್ನು ಆಯ್ಕೆ ಮಾಡಿದ್ವಿ. ಅವರುಗಳನ್ನು ಸಂದರ್ಶನಕ್ಕೆ May 29ರಂದು ಕರೆದ್ವಿ. ಅದರಲ್ಲಿ ಆಯ್ಕೆ ಆದವರನ್ನು ಅಂತಿಮ ಸ್ಪರ್ಧೆಗೆ ಕರೆದ್ವಿ. 18 ಹುಡುಗಿಯರು ಹೀಗೆ ಆಯ್ಕೆ ಆಗಿದ್ರು. ತಮ್ಮದೇ ಕಾರಣಗಳಿಂದ 5 ಹುಡುಗಿಯರು ಭಾಗವಹಿಸದಿದ್ದರಿಂದ ಅಂತಿಮ ಸ್ಪರ್ಧೆಗೆ 13 ಹುಡುಗಿಯರು ಉಳಿದುಕೊಂಡ್ರು.

**ಸೌಂದರ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿದ ಅನುಭವ ಇವರಿಗಿತ್ತಾ? ಇರದವರಿಗೆ ಯಾವ ರೀತಿ ತರಬೇತಿ ಕೊಟ್ರಿ?**

ಬಹುಮಟ್ಟಿಗಿನ ಹುಡುಗಿಯರಿಗೆ ಅನುಭವ ಇರಲಿಲ್ಲ. ಸಂಘದಿಂದಲೇ ಶ್ರೀ ಸುದೀಶ್ ಹೆಗ್ಡೆ ಅವರನ್ನು ಸಂಗೀತಕ್ಕೆ ತಕ್ಕಂತೆ Cat Walk ಮಾಡಲು ತರಬೇತಿ ಕೊಡುವಂತೆ ನೇಮಿಸಿದ್ವಿ. ಒಂದೆರಡು ದಿನಗಳು ಅಭ್ಯಾಸ ನಡೀತು. Cat Walkಗೆ high heel ಮೆಟ್ಟುಗಳನ್ನು ಹಾಕದಿದ್ರೆ swing ಇರಲ್ಲ. ಹಾಗಾಗಿ ಇದಕ್ಕೂ ಈ ಅಭ್ಯಾಸ ಸಹಾಯ ಮಾಡ್ತು. ಹೆಚ್ಚಿನ ಹಣ ಇದಕ್ಕಾಗಿ ವಿನಿಯೋಗಿಸದೆ ತಮ್ಮಲ್ಲಿ manage ಮಾಡಬೇಕೆಂದು ಸಲಹೆ ಕೊಟ್ವಿ.

**ಸ್ಪರ್ಧೆ ಯಾವ ರೀತಿಯಿತ್ತು?**

ಮೂರು ಸುತ್ತಿನ ಸ್ಪರ್ಧೆಯಿತ್ತು. ಮೊದಲನೇ ಸುತ್ತಿನಲ್ಲಿ ಸಾಂಪ್ರದಾಯಿಕ ಉಡುಗೆ- ಸೀರೆ; ಎರಡನೇ ಸುತ್ತಿನಲ್ಲಿ Ethnic Dress. ಘಾಗ್ರ ಚೋಲಿ ಇತ್ಯಾದಿ; ಪಾಶ್ಚಾತ್ಯ ಉಡುಗೆ ಮೂರನೆಯ ಸುತ್ತಿಗಿತ್ತು. Hair style, Make-upಗೆ ಅವರೇ ವ್ಯವಸ್ಥೆ ಮಾಡಿಕೊಂಡಿದ್ರು.

**ನಿರ್ಣಾಯಕ ಸುತ್ತಿಗೆ ಎಷ್ಟು ಹುಡುಗಿಯರನ್ನು ಆಯ್ಕೆ ಮಾಡಿದ್ರಿ?**

6 ಹುಡುಗಿಯರನ್ನು ಆಯ್ಕೆ ಮಾಡಿ ಅವರಿಗೆ ಪ್ರಶ್ನೆಗಳನ್ನು ಕೇಳಿದ್ವಿ. ಅವರು ಕೊಟ್ಟ ಆಟು ಉತ್ತರದಿಂದ ವಿಜೇತರ ನಿರ್ಣಯ ಆಯ್ತು. ಕನ್ನಡದಲ್ಲಿ ಆ ತಕ್ಷಣಕ್ಕೆ ಉತ್ತರ ಕೊಡಲು ತಬ್ಬಿಬ್ಬಾದೀತು ಎಂದು Englishನಲ್ಲೇ ಪ್ರಶ್ನೆ-ಉತ್ತರಗಳ ಸುತ್ತು ನಡೀತು.

**ಪ್ರಶ್ನೆಗಳನ್ನು ಸೂಚಿಸಿದ್ದು ಯಾರು?**

ನಾನು, ವಿಜಯ ಮತ್ತು ಶಿಲ್ಪಾಗಾದರು ಸೇರಿ 20 ಪ್ರಶ್ನೆಗಳನ್ನು ಸಿದ್ಧ ಪಡಿಸಿ ಚೀಟಿಯಲ್ಲಿ ಬರೆದ್ವಿ. ಲಾಟರಿ ಎತ್ತುವಂತೆ ಆ ಚೀಟಿಗಳಲ್ಲಿ ಒಂದನ್ನು ಸ್ಪರ್ಧಿಗಳು ತೆಗೆದುಕೊಂಡು ಉತ್ತರಿಸಿದ್ರು.

**ಇದಕ್ಕಾಗಿ ಸಾಕಷ್ಟು ಹಣ ಖರ್ಚಾಗಿರಬಹುದಲ್ಲವೇ?**

ಇಡೀ ಸ್ಪರ್ಧೆಗಾಗಿ 41,000 ರೂಪಾಯಿಗಳು ಖರ್ಚಾಯ್ತು. ನಮ್ಮ ಅಧ್ಯಕ್ಷರಾದ ಶ್ರೀ ಸದಾನಂದ ಶೆಟ್ಟಿ, Narad Consultantsನ ಶ್ರೀ ಅನಿಲ್ ರಾವ್ ಆರ್ಥಿಕ ನೆರವು ನೀಡಿದ್ರು. ಸಂಘದ ಮಹಿಳಾ ವಿಭಾಗದಿಂದ ಕೂಡಾ ಒಂದಿಷ್ಟು ಹಣ ವಿನಿಯೋಗಿಸಿಕೊಂಡಿದ್ದೇವೆ.

**ಸುತ್ತುಗಳ ಅಂತರದಲ್ಲಿ ನಡೆದ ಮನೋರಂಜನಾ ಕಾರ್ಯಕ್ರಮದ ಸಂಯೋಜನೆ ಯಾರದ್ದು?**

ಶ್ರೀಮತಿ ವಿದ್ಯಾ ಮೂರ್ತಿ ನಮ್ಮ ಸಂಘದ ಸದಸ್ಯರ ಮಕ್ಕಳಿಂದ ಮನೋರಂಜನಾ ಕಾರ್ಯಕ್ರಮ ಮಾಡಿಸಿದ್ರು. ವಿವಿಧ ಶೈಲಿಯ ನೃತ್ಯಗಳು ಕಾರ್ಯಕ್ರಮಕ್ಕೆ ವೈವಿಧ್ಯತೆ ತಂದುಕೊಟ್ಟವು.

**ಪ್ರತಿ ವರ್ಷ ಈ ರೀತಿಯ ಸ್ಪರ್ಧೆ ಏರ್ಪಡಿಸುವ ಆಲೋಚನೆ ಇದೆಯೇ?**

Not at all. One time show ಇದು. ಎಲ್ಲರ ಸಹಕಾರ ಪರಿಶ್ರಮದಿಂದ ತಕ್ಕ ಮಟ್ಟಿಗೆ ಯಶಸ್ವಿ ಪ್ರಯೋಗ ಮಾಡಿದ್ದೇವೆ ಅನ್ನೋ ತೃಪ್ತಿ ಸದ್ಯದಲ್ಲಿದೆ. ನಮ್ಮೆಲ್ಲರನ್ನೂ ಉತ್ಸಾಹ ಹಾಗೂ ಇತರರಿಂದ ಸಹಕಾರ ಸಿಕ್ಕರೆ Fashion Show ತರಾ ಏನಾದರೂ ಮಾಡಬಹುದೇನೋ ನೋಡೋಣ.

**ಕರ್ನಾಟಕದ ಬಗ್ಗೆ ಒಂದೂ ಪ್ರಶ್ನೆ ಇರಲಿಲ್ಲ ಅಂತ ಪ್ರತಿಕ್ರಿಯೆಗಳು ಕೇಳಿ ಬಂತು ಅದಕ್ಕೇನು ಹೇಳ್ತೀರಿ?**

ನಾನಾ ವಿಷಯಗಳನ್ನು ಕುರಿತ ಸಾಕಷ್ಟು ಪ್ರಶ್ನೆಗಳನ್ನು ಚೀಟಿಯಲ್ಲಿ ಬರೆದು ಹಾಕಿದ್ವಿ. ಲಾಟರಿಯಂತೆ ಸ್ಪರ್ಧಿಗಳು ಎತ್ತಿ ಉತ್ತರ ಕೊಟ್ಟಿದ್ದರಿಂದ ಈ ಬಗ್ಗೆ ಹೆಚ್ಚೇನು ನಾವು ಮಾಡೋ ಹಾಗೆ ಇರಲಿಲ್ಲ.

ಎಲ್ಲವನ್ನು ಸುಸೂತ್ರವಾಗಿ ನಿರ್ವಹಿಸಿದ ನೆಮ್ಮದಿ ಸಂತೋಷ ಇವರಲ್ಲಿ ಕಂಡು ಬರುತ್ತಿತ್ತು. `ನೇಸರು' ಪರವಾಗಿ ಅವರನ್ನು ವಂದಿಸಿ ಹೊರಟಾಗ ಸೌಂದರ್ಯ ಸ್ಪರ್ಧೆಗೆ ಜೀವಂತಿಕೆ ಮೆರುಗನ್ನು ಕೊಟ್ಟ ವಿಜೇತರನ್ನು ಹೊರಗುಳಿಸಿದ ಸಂದರ್ಶನ ಅಪೂರ್ಣ ವೆನಿಸತೊಡಗಿತು. ಮುಖತಃ ಭೇಟಿಯಾಗಲು ಸಮಯಾವಕಾಶ ಇರದ ಕಾರಣ ವಿಜೇತರೊಂದಿಗೆ ಟೆಲಿಫೋನಿನ ಮೂಲಕ ನಡೆಸಿದ ಸಂವಾದದ ಕೆಲವು ಮುಖ್ಯ ಅಂಶಗಳನ್ನು ಇಲ್ಲಿ ಕೊಡುತ್ತಿದ್ದೇನೆ.

## ಮಿಸ್ ಕರ್ನಾಟಕ
## ಕುಮಾರಿ ಐಶ್ವರ್ಯ ಶೆಟ್ಟಿ

18 ವರ್ಷದ ಐಶ್ವರ್ಯ ಬಾಂದ್ರಾದ M. M. K. ಕಾಲೇಜಿನ Commerce ವಿದ್ಯಾರ್ಥಿನಿ. ಮಾತೃಭಾಷೆ ತುಳು.

**ಮಿಸ್ ಕರ್ನಾಟಕ ಆಗಿ ನಿಮಗೆ ಹೇಗೆನಿಸುತ್ತದೆ?**

ಬಂಟರ ಸಂಘ ಮತ್ತು ಕಾಲೇಜಿನ Fashion Showನಲ್ಲಿ ಭಾಗವಹಿಸುತ್ತಿದ್ದೆ. ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಿದ್ದು ಇದೇ ಮೊದಲು. ನಂಗೆ ಮೊದಲ ಸ್ಥಾನ ಬಂದಾಗ ಖುಷಿಯಾಯ್ತು. ಇದರಿಂದ ನನ್ನಲ್ಲಿ ಆತ್ಮವಿಶ್ವಾಸ ಹೆಚ್ಚಿದೆ.

**ಸ್ಪರ್ಧೆಯ ಸಮಯದಲ್ಲಿ ನಿಮ್ಮ ಅನುಭವಗಳೇನು?**

ಇದೊಂದು ಸುಂದರ ಅನುಭವ. ಮೊದಲಲ್ಲಿ ಸ್ವಲ್ಪ ಭಯ - ಸಂಕೋಚ ಇತ್ತು. ಬಂದಿದ್ದ ಪ್ರೇಕ್ಷಕರು ತುಂಬಾ ಉತ್ತೇಜನ ಕೊಡೋ ಹಾಗೆ Cheer ಮಾಡ್ತಿದ್ರು. ಅವರ ಮುಂದೆ ಸಹಜವಾಗಿ ಇರೋದು ಸಾಧ್ಯ ಆಯ್ತು.

**ಈ ದಿಕ್ಕಿನಲ್ಲಿ ಮುಂದುವರೆಯಕ್ಕೆ ಇದು ಮೊದಲ ಹೆಜ್ಜೆ ಅಂತ ನಿಮಗನ್ನಿಸುತ್ತಿದೆಯೇ?**

ಹಾಗಂತ ಹೇಳಬಹುದೇನೋ. Modelling ಮತ್ತು Fashion Showಗಳಲ್ಲಿ ಭಾಗವಹಿಸುವ ಆಸಕ್ತಿ ನನಗಿದೆ.

**ತಂದೆ ತಾಯಿಗಳ ಸಹಕಾರ ನಿಮಗೆಷ್ಟರ ಮಟ್ಟಿಗೆ ಸಿಕ್ತು?**

ತಾಯಿ Beautician. ಹಾಗಾಗಿ ಅವರಿಂದ ನಂಗೆ ತುಂಬಾ ಉತ್ತೇಜನ ಸಿಕ್ತು. ಅವರೇ ನನ್ನ Gownನ Design ಮಾಡಿದ್ರು. ಮಿಕ್ಕ ಉಡುಪುಗಳೂ ಅವರ ಆಯ್ಕೆಯೇ. Make-up, ಕೇಶ ವಿನ್ಯಾಸ ಎಲ್ಲಾ ಅವರೇ ಮಾಡಿದ್ರು.

**ಸ್ಪರ್ಧೆಯಲ್ಲಿ ನಿಮಗೆ ಬಂದ ಪ್ರಶ್ನೆ ಅದಕ್ಕೆ ನಿಮ್ಮ ಉತ್ತರವೇನು?**

ಈ ಸಲ ಚುನಾವಣೆಯಲ್ಲಿ ನೀವು ಮತ ಚಲಾಯಿಸಿದ್ರಾ? ಚಲಾಯಿಸಿದ್ರೆ ಏಕೆ? ಚಲಾಯಿಸದಿದ್ದರೆ ಏಕೆ? ಎಂಬ ಪ್ರಶ್ನೆಗೆ ನಾ ಕೊಟ್ಟ ಉತ್ತರ ``ಇಲ್ಲ. ನಂಗಿನ್ನೂ ಆಗ 18 ವರ್ಷಗಳು ತುಂಬಿರಲಿಲ್ಲ''.

## ಮೊದಲ ರನ್ನರ್ ಅಪ್
## ಕುಮಾರಿ ಶ್ರೇಯಾ ರಾವ್

20 ವರ್ಷದ ಶ್ರೇಯಾ SNDTಯಿಂದ Fashion Designing Course ಮಾಡಿದ್ದಾರೆ. Fashion Designer ಶ್ರೀ ಅರ್ಜುನ ಖನ್ನಾ ಅವರಿಗೆ ಕೆಲಸ ಮಾಡುತ್ತಿದ್ದಾರೆ. ಈಕೆಯ ಮಾತೃಭಾಷೆ ಕನ್ನಡ.

**Fashion Designer ಅಂದ್ರೆ ಸ್ಪರ್ಧೆಯಲ್ಲಿ ನೀವು ಧರಿಸಿದ ಉಡುಪುಗಳು ನಿಮ್ಮದೇ ವಿನ್ಯಾಸವೇ?**

ಹೌದು. ನಾನೇ ಎಲ್ಲಾ Design ಮಾಡಿದ್ದು. ಸೀರೆಯೊಂದಿಗೆ ಧರಿಸಿದ್ದ ಮಣಿಗಳು ತೂಗಾಡುವ ರವಿಕೆ, ಘಾಗ್ರ ಚೋಲಿ, ನಾನೇ ವಿನ್ಯಾಸ ಮಾಡಿದ್ದು. ಉಡುಪುಗಳೊಂದಿಗೆ ಹೊಂದಿಕೆಯಾಗುವಂತ ಇತರ ಪರಿಕರಗಳನ್ನು ನಾನೇ ನಿರ್ಧರಿಸಿದ್ದು. ನನ್ನ ಸ್ನೇಹಿತೆ Make-up ಮಾಡಿಕೊಳ್ಳಕ್ಕೆ ಸಹಾಯ ಮಾಡಿದ್ಲು.

**ನಿಮ್ಮನ್ನು ಸ್ಪರ್ಧೆಯಲ್ಲಿ ಕೇಳಿದ ಪ್ರಶ್ನೆ ಅದಕ್ಕೆ ನಿಮ್ಮ ಉತ್ತರವೇನು?**

ಸ್ತ್ರೀಯರು ಪುರುಷರಿಗಿಂತ ಉತ್ತಮ ಸಾಧಕರು ಅಂತ ನಿಮಗನ್ನಿಸುತ್ತಿದೆಯೆ/ ಹೌದಾದರೆ ಏಕೆ?

ಇಲ್ಲವಾದರೆ ಏಕೆ? ಅಂತನ್ನುವ ಪ್ರಶ್ನೆ. ಅದಕ್ಕೆ ನಾ ಕೊಟ್ಟ ಉತ್ತರ `ಹೌದು ಸ್ತ್ರೀಯರು ಪುರುಷರಿಗಿಂತ ಉತ್ತಮ ಸಾಧಕರು. ಕಿರಣ್ ಬೇಡಿಯಂತಹ, ಮಹಿಳೆ ಪುರುಷರು ಸಾಧಿಸದಿದ್ದನ್ನು ಸಾಧಿಸಲಿಲ್ಲವೇ?

**ಈ ಸ್ಪರ್ಧೆಯ ಬಗ್ಗೆ ನಿಮ್ಮ ಅನಿಸಿಕೆಗಳು?**

*ಇಡೀ ಪ್ರದರ್ಶನ ಉತ್ತಮವಾಗಿತ್ತು. ಇದೊಂದು ಅಪೂರ್ವ ಅನುಭವ. ಪ್ರೇಕ್ಷಕರು ನಮ್ಮನ್ನೆಲ್ಲಾ ಹುಮ್ಮಸ್ಸು ಬರುವಂತೆ ಪ್ರೋತ್ಸಾಹಿಸಿದರು.*

**ಹಿಂದೆಯೂ ಈ ರೀತಿ ಸ್ಪರ್ಧೆಗಳಲ್ಲಿ ನೀವು ಭಾಗವಹಿಸಿದ್ರಾ?**

*ಲಕ್ಮೆ ಖೋಟ್ ಸೂರತ್‌ನಲ್ಲಿ ಬಂದಿದ್ದೆ. ಚಿಕ್ಕಂದಿನಿಂದ ನಾಟಕ, ಆಟ ಸ್ಪರ್ಧೆಗಳಲ್ಲಿ ನನಗೆ ಆಸಕ್ತಿಯಿತ್ತು. ಹಾಗಾಗಿ ಯಾವ ರೀತಿಯ ಹಿಂಜರಿಕೆ, ಸಭಾ ಕಂಪನ ನನಗಿರಲಿಲ್ಲ.*

**ಮುಂದೇನು ಮಾಡಬೇಕೆಂದಿದ್ದೀರಾ?**

*Advertising ಮತ್ತು T.V. Commercialಗಳಿಗೆ ಅವಕಾಶ ಸಿಕ್ಕರೆ ದುಡಿಯುವ ಆಸೆಯಿದೆ.*

## ಎರಡನೇ ರನ್ನರ್ ಅಪ್
## ಕುಮಾರಿ ಗೌರಿ ಎಳವಟ್ಟಿ

25 ವರ್ಷದ ಗೌರಿ ರೈಲ್ ಪದಮ್‌ಸೆ ನಡೆಸುವ Play School ಮತ್ತು ಅವಕಾಶ ವಂಚಿತ ಮಕ್ಕಳಿಗಾಗಿ ನಡೆಸುವ `ಆಕಾಂಕ್ಷ'ದಲ್ಲಿ ಶಿಕ್ಷಕಿ. ಈಕೆ Commerce ಮತ್ತು Economicsನಲ್ಲಿ ಪದವಿಗಳಿಸಿ. Law ಮಾಡಿದ್ದಾರೆ. Montessori Course ಮಾಡಿರುವ ಈಕೆಗೆ ಶಿಕ್ಷಣ ರಂಗದಲ್ಲಿ ಹೆಚ್ಚಿನ ಒಲವು. ಮಾತೃಭಾಷೆ ಕನ್ನಡ.

**ಸೌಂದರ್ಯ ಸ್ಪರ್ಧೆಯ ಬಗ್ಗೆ ನಿಮಗೆ ಆಸಕ್ತಿ ಮೂಡಿದ್ದು ಹೇಗೆ?**

*ನನ್ನ ಅಂಕಲ್ ಮತ್ತು cousin ಭಾಗವಹಿಸುವಂತೆ ಸೂಚಿಸಿದರು. ಖಡಿಗೆ ಹೇಳ್ಬೇಕೆಂದರೆ Lipstick ಬಿಟ್ರೆ ಹೆಚ್ಚಿನ ಅಲಂಕಾರ ಸಾಮಗ್ರಿ ಉಪಯೋಗಿಸದ ನಂಗೆ ಇದರಲ್ಲೆಲ್ಲಾ ಹೆಚ್ಚಿನ ಆಸಕ್ತಿಯಿರಲಿಲ್ಲ.*

**ಸ್ಪರ್ಧೆಯಲ್ಲಿ ನಿಮಗಾದ ಅನುಭವ?**

*ಸಭಾ ಕಂಪನದಿಂದಾಗಿ ಮೊದಲ ಸುತ್ತಿನಲ್ಲಿ ಹಿತವೆನಿಸಿರಲಿಲ್ಲ. ನಂತರ ಶ್ರೇಯಾ ಮತ್ತಿತರ ಪ್ರತಿಸ್ಪರ್ಧಿಗಳ ಉತ್ತೇಜನದಿಂದ ಸ್ವಲ್ಪ ಧೈರ್ಯ ಬಂತು. ಶ್ರೀ ಸುಧೀಶ್ ಹೆಗ್ಡೆ ಕೊಟ್ಟ trainingನಿಂದ ಬಹಳ ಸಹಾಯ ಆಯ್ತು. ಆದ್ರೂ, ಸಿಕ್ಕ training ಕಡಿಮೆ ಅಂತಲೇ ಅನ್ನಿಸಿತು. ಎಲ್ಲವನ್ನು ಒಂದು ಸಲವಾದ್ರೂ, ಅನುಭವಿಸಿ ನೋಡಿದಾಗಷ್ಟೇ ಅದರ ಕಷ್ಟ-ಸುಖಗಳು ಅರಿವಾಗೋದು. ಸ್ಪರ್ಧೆಯನ್ನು ದೂರ ಕೂತು ನೋಡುವುದಕ್ಕೂ ಅದರಲ್ಲಿ ಒಬ್ಬ ಸ್ಪರ್ಧಿಯಾಗುವುದಕ್ಕೂ ಬಹಳ ವ್ಯತ್ಯಾಸ ಇದೆ. ಈ ಸ್ಪರ್ಧೆ ನನಗೆ ಒಳ್ಳೆಯ ಅವಕಾಶ ಸೃಷ್ಟಿಸಿ ಕೊಡ್ತು.*

**ನಿಮ್ಮ ಅಭಿಪ್ರಾಯದಲ್ಲಿ ಸೌಂದರ್ಯ ಅನ್ನೋದೇನು?**

*ಸೌಂದರ್ಯ ತೀರಾ ಅಂತರಿಕವಾದದ್ದು. ಅದು ನಮ್ಮ ಸ್ವಭಾವ, ನಡುವಳಿಕೆ, ರೀತಿ ನೀತಿಯಿಂದ ವ್ಯಕ್ತವಾಗುವಂತಹದು. ಇನ್ನೊಬ್ಬರಿಗೆ ಸಹಾಯ ಮಾಡೋದು ಅದರಲ್ಲಿಷ್ಟೇ ಅಲ್ಲ. ಮಾಡಿದ ಸಹಾಯದಿಂದ ಮತ್ತೆನನ್ನೋ ನಿರೀಕ್ಷಿಸದೆ ನೆರವಾಗುವ ವ್ಯಕ್ತಿತ್ವದ ಸೌಂದರ್ಯವನ್ನು ನಾನು ದೈಹಿಕ ಸೌಂದರ್ಯಕ್ಕಿಂತ ಹೆಚ್ಚು ಅಮೂಲ್ಯ ಅಂತ ಭಾವಿಸ್ತೀನಿ.*

**ನಿಮ್ಮ ಉಡುಪು - Make-upಗಳ ಬಗ್ಗೆ ಹೇಳಿ.**

*ನನ್ನಲ್ಲಿದ್ದ ಉಡುಪುಗಳನ್ನೇ ಉಪಯೋಗಿಸಿದ್ದೆ. Make-up ನನ್ನ friend ಮಾಡಿದ್ಲು.*

**ನಿಮಗೆ ಬಂದ ಪ್ರಶ್ನೆ ಯಾವುದು? ಅದಕ್ಕೆ ನಿಮ್ಮ ಉತ್ತರವೇನು?**

*ಇಂದಿನ ಜನಾಂಗಕ್ಕೆ ನಿಮ್ಮ ಸಂದೇಶವೇನು? ಎಂಬ ಪ್ರಶ್ನೆ ಬಂದಿತ್ತು. ಅದಕ್ಕೆ ಬದುಕಿನ ಸಣ್ಣ ಪುಟ್ಟ ಖುಷಿಗಳನ್ನು ಅನುಭವಿಸಲಾರದಂತ ಸ್ಪರ್ಧಾತ್ಮಕವಾದ ಬದುಕಿದು. ತಾಳ್ಮೆ, ಸಂಯಮ, ಸಂತೃಪ್ತಿಯಿಂದ ಬದುಕಿ ಏನನ್ನಾದರೂ ಸಾಧಿಸಬೇಕು. ಗುರಿಯಷ್ಟೇ ಸಾಧನೆಯ ಹಾದಿಯೂ ಮುಖ್ಯ. ಆಗ ಆನಂದ ಉಂಟು ಮಾಡಬೇಕು - ಅಂತ ಉತ್ತರ ಕೊಟ್ಟೆ.*

*ಯೌವ್ವನದ ಉತ್ಸಾಹದ ದಾಟಿಯಲ್ಲಿ ಮಾತನಾಡಿದ ಈ ಮೂರುವರು ಸುಂದರಿಯರ ಸ್ನೇಹಪೂರ್ಣ ವ್ಯಕ್ತಿತ್ವ ಮೆಚ್ಚಿಕೆಯಾಯ್ತು. ಇವರೊಂದಿಗೆ ಮಾತನಾಡಿದ ಅನುಭವ ಹಿತವಾಗಿತ್ತು. `ನೇಸರು' ಪರವಾಗಿ ಶುಭ ಹಾರೈಕೆಗಳು ಮತ್ತು ಧನ್ಯವಾದಗಳನ್ನು ಹೇಳಿ Phone ಇಟ್ಟಾಗ ಅರಿವಿಗೆಟುಕದ ಸಂಭ್ರಮ ಉತ್ಸಾಹ ನನ್ನಲ್ಲಿ ಮೂಡಿತ್ತು.*

---

## ಬಲಿ

(ಪುಟ 5ರಿಂದ)

ವಿಠೋಬ ಅವಳ ಬಳಿಗೆ ಹೋಗಿ ಕುಳಿತುಕೊಂಡ.

``ಆಯಿತಲ್ಲಾ - ನಾನು ಎಷ್ಟು ಹೇಳಿದರೂ ನೀವು ಕೇಳಿದಿರಾ ನಾನೆಂದರೆ ನಿಮಗೆ ಅಷ್ಟು ತಾತ್ಸಾರವಾಯಿತಲ್ಲಾ? ನಿಮ್ಮ ದೇವರಂತಹ ಗೆಳೆಯ, ಮಂಗಳಾರತಿ ಮಾಡಿ" ಸುನೀತ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು.

``ನೀನಾದರೂ ಯಾಕೆ ಅಷ್ಟು ದುಡುಕಬೇಕಾಗಿತ್ತು? ಎಚ್ಚರವಾದಾಗ ಅವ ಸುಮ್ಮಗೆ ಹೋಗಿ ಬಿಡುತ್ತಿದ್ದ. ಈಗ ದೊಡ್ಡ ಗಂಡಾಂತರವನ್ನೇ ತಂದೊಡ್ಡಿದೆಯಲ್ಲಾ? ಪೋಲೀಸರ ಕೈಗೆ ನಾನು ನೀನೂ ಇಬ್ಬರೂ ಸಿಕ್ಕಿ ಬೀಳುವಂತಾಯಿತು. ಕೊಲೆಗಡುಕನಿಗೆ ಆಶ್ರಯವಿತ್ತ ನಮಗೂ ಶಿಕ್ಷೆ ತಪ್ಪದು. ಕಾರಣಾಂತರಗಳಿಂದ ಕಾಲ್ಯಾ ಬಿಡುಗಡೆಯಾಗಿ ಬಂದರೆ ನಮ್ಮನ್ನು ಕೊಲೆ ಮಾಡದೆ ಅವ ಬಿಡುವವನಲ್ಲ".

ಸುನೀತ ಮಲಗಿದವಳು ಒಮ್ಮೆಲೇ ಎದ್ದು ಕುಳಿತಳು. ಪೋಲೀಸರು ಬಂಧಿಸಿಕೊಂಡು ಹೋಗುವಾಗ ಕಾಲ್ಯಾ ಅವಳ ಕಡೆ ನೋಡಿ - ``ಬೇವರ್ಸಿ ಹೆಣ್ಣೆ ನನ್ನನ್ನು ಪೋಲೀಸರ ಕೈಗೆ ಕೊಟ್ಟೆಯಲ್ಲಾ - ನಿನ್ನನ್ನು ಹೀಗೆನೇ ಬಿಡುವವನಲ್ಲ, ಈ ಕಾಲ್ಯಾ ತಿಳಿಯಿತೇ?" ಎಂದು ಹೇಳಿದ ಆ ಮಾತು, ಆ ದೃಶ್ಯ ಒಮ್ಮೆಲೇ ಅವಳ ಕಣ್ಣ ಮುಂದೆ ಬಂದಂತಾಯಿತು. ಹೆದರಿ ನಡುಗಿ ಹೋದಳು.

``ಪೋಲೀಸರಿಗೆ ನಾವು ಕೊಡಬೇಕಾದ ವರದಿ ಕೊಟ್ಟಾಯಿತು. ಊರಿಗೆ ಹೋಗಿ ಬಿಡುವ. ಈ ಹಾಳು ಮುಂಬಯಿಯೇ ಬೇಡ. ನೀವು ಕೆಲಸಕ್ಕೆ ರಾಜೀನಾಮೆ ಕೊಟ್ಟು ಬಿಡಿ" ಸುನೀತ ಗಂಡನಿಗೆ ಸಲಹೆಯಿತ್ತಳು.

``ಅದೆಲ್ಲಾ ಅಷ್ಟು ಸುಲಭವೇ? ನೂರು ಬಾರಿ ಪೋಲೀಸರು ನಮ್ಮನ್ನು ಠಾಣೆಗೆ ಕರೆಯಬಹುದು. ಕೋರ್ಟಿಗೂ ಹೋಗಬೇಕಾದೀತು. ಊರಿಗೆ ಹೋದರೂ ಕರೆದಾಗ ಬರಲೇ ಬೇಕು. ಇದೆಲ್ಲಾ ನಿನ್ನ ಮೂರ್ಖತನದಿಂದಾಯಿತು.

``ಹಾಗಾದರೆ ನನ್ನನ್ನು ಊರಿಗೆ ಕಳುಹಿಸಿರಿ. ಅವನನ್ನು ಪೋಲೀಸರ ಕೈಗೆ ಕೊಟ್ಟವಳು ನಾನಲ್ಲವೇ? ಅವನ ಸಿಟ್ಟೆಲ್ಲಾ ನನ್ನ ಮೇಲಿದೆ. ಪೋಲೀಸರು ಬಂಧಿಸಿದಾಗ ನನ್ನ ಕಡೆ ನೋಡಿ - ``ನಿನ್ನನ್ನು ಹೀಗೆನೇ ಬಿಡುವವನಲ್ಲ, ಈ ಕಾಲ್ಯಾ" ಎಂದಿದ್ದ.

``ಅಯ್ಯೋ, ಹಾಗೇ ಹೇಳಿದ್ದನೇ? ಸರ್ವನಾಶವಾಯಿತು. ಕಾಲ್ಯಾನಿಗೆ ಬಿಡುಗಡೆಯಾಯಿತೆಂದರೆ ನಮ್ಮ ಕಥೆ ಮುಗಿದಂತೆಯೆ. ನಾವು ಎಲ್ಲಿ ಹೋದರೂ ಅವನು ಬಿಡುವವನಲ್ಲ. ಉತ್ತರ ಭಾರತದವನೊಬ್ಬ ಅವನ ಗ್ಯಾಂಗಿನವನೊಬ್ಬನಿಗೆ ಹೊಡೆದು ಊರಿಗೆ ಓಡಿ ಹೋಗಿದ್ದ. ಅವನ ವಿಳಾಸ ಪತ್ತೆ ಹಚ್ಚಿ ಅಲ್ಲಿಗೂ ಹೋಗಿ ಅವನನ್ನು ಹೊಡೆದು ಕೊಂದು ಬಂದಿದ್ದ ಕಾಲ್ಯಾ. ಸ್ತ್ರೀಯರ ಮಾನಾಪಹರಣವನ್ನು ಮಾಡುವುದರಲ್ಲೂ ನಿಸ್ಸೀಮ. ಯಾವುದಕ್ಕೂ ಹೇಸುವವನಲ್ಲ".

ಕಾಲ್ಯಾ ಸ್ತ್ರೀಯರ ಮಾನಾಪಹರಣ ಮಾಡುತ್ತಾನೆಂದು ಗಂಡನ ಬಾಯಿಂದ ಕೇಳಿದಾಗ ಸುನೀತ ನೆಲಕ್ಕೆ ಇಳಿದೇ ಹೋದಳು. ಅವನ ಚೂರಿಗೆ ಬಲಿಯಾಗಿ ಪ್ರಾಣ ಹೋದರೂ ಚಿಂತಿಲ್ಲ, ಆದರೆ ಮಾನ ಕಳೆದುಕೊಳ್ಳುವುದು ಸಾವಿಗಿಂತಲೂ ಭಯಂಕರ. ಸುನೀತಳ ತಲೆ ಸುತ್ತಲಾರಂಭಿಸಿತು. ಬವಳಿ ಬಂದಂತಾಯಿತು. ಚಾಪೆಯ ಮೇಲೆ ಒರಗಿ ಕೊಂಡಳು.

ಕಾಲ್ಯಾನಿಗೆ ಜಾಮೀನಿನ ಮೇಲೆ ಬಿಡುಗಡೆಯಾಯಿತು.

ಸುನೀತ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಳು.

●

ಈ ಸ್ಥಿತಿಯನ್ನು ರಕ್ಷಿಸಲು ನಾನಾ ಪ್ರಕ್ರಿಯೆಗಳು

# ದೇಹದ ಸ್ಥಿರ ಉಷ್ಣತೆ

● ಎಂ. ಆರ್. ನಾಗರಾಜು

'ಬಿಂಮ್ಮ ತಣ್ಣಗೆ . . .' ಎಂದು ಪಂಜೆ ಮಂಗೇಶರಾಯರು ನಾಗರಹಾವನ್ನು ತಮ್ಮ ಗೀತೆಯೊಂದರಲ್ಲಿ ವರ್ಣಿಸಿದ್ದಾರೆ. ಹಾವಿನ ಮೈ ತಣ್ಣಗಿರಲು ಕಾರಣ - ಅದು ಶೀತರಕ್ತ ಪ್ರಾಣಿ. ಶೀತರಕ್ತ ಪ್ರಾಣಿ ಎಂದರೆ ಶೀತವಾದ ರಕ್ತ ಉಳ್ಳ ಪ್ರಾಣಿ ಅಲ್ಲ. ಯಾವ ಪ್ರಾಣಿ ತನ್ನ ದೇಹದ ಉಷ್ಣತೆಯನ್ನು ಸ್ಥಿರವಾಗಿ ಕಾಪಾಡಿಕೊಳ್ಳಲಾರದೋ ಅಂತಹ ಪ್ರಾಣಿ ಎಂದರ್ಥ. ತಮ್ಮ ಪರಿಸರದಲ್ಲಿ ಉಷ್ಣತೆಯ ಏರುಪೇರಾದರೆ ಈ ಪ್ರಾಣಿಗಳ ದೇಹದ ಉಷ್ಣತೆಯಲ್ಲೂ ಏರುಪೇರು ಕಂಡು ಬರುತ್ತದೆ.

ಮಾನವರಲ್ಲಿ ಹಾಗಲ್ಲ. ಪರಿಸರದ ಉಷ್ಣತೆಯ ಏರುಪೇರಿಗೆ ಅನುಗುಣವಾಗಿ ದೇಹದ ಉಷ್ಣತೆಯಲ್ಲಿ ಕೊಂಚ ಏರುಪೇರು ಆಗುವುದಾದರೂ ಅದು ನಗಣ್ಯ. ಹೊರಗಣ ಏರುಪೇರನ್ನು ಸರಿಯಾಗಿಸಿ ಮಾನವ ದೇಹ ತನ್ನ ಉಷ್ಣತೆಯನ್ನು ಕಾಪಾಡಿಕೊಳ್ಳಲು ಉಪಯೋಗವಾಗುವಂತಹ ಅನೇಕ ವ್ಯವಸ್ಥೆಗಳು ಮಾನವ ದೇಹದಲ್ಲಿವೆ. ಅದಕ್ಕೆಂದೇ ಮಾನವರು ಉಷ್ಣರಕ್ತ ಪ್ರಾಣಿಗಳು.

ಇಷ್ಟೊಂದು ಪರಿಶ್ರಮ ವಹಿಸಿಯಾದರೂ ಮಾನವ ದೇಹ ತನ್ನ ಉಷ್ಣತೆಯನ್ನು ಏಕರೂಪದಲ್ಲಿರಿಸಿಕೊಳ್ಳಬೇಕೇಕೆ ಎಂಬ ಪ್ರಶ್ನೆ ಸಹಜ. ದೇಹದ, ಅದರಲ್ಲೂ ಮಿದುಳಿನ ಕಾರ್ಯದಕ್ಷತೆಯನ್ನು ಹೆಚ್ಚಿಸುವಲ್ಲಿ ಸ್ಥಿರ ಉಷ್ಣತೆಯ ಪಾತ್ರ ಮಹತ್ವದ್ದು. ಆದಿಮ ಜೀವಿಗಳಲ್ಲಿ ಕಂಡುಬರದ ಉಷ್ಣತಾ ಸ್ಥಿರತೆ - ವಿಕಸನದ ಕೊನೆಕೊನೆಯ ಹಂತದಲ್ಲಿ ಕಂಡು ಬಂದಿರುವುದು. ಉಷ್ಣರಕ್ತ ಪ್ರಾಣಿಗಳು ಶೀತರಕ್ತ ಪ್ರಾಣಿಗಳಿಗಿಂತ ಹೆಚ್ಚು ಜಾಣ್ಮೆ ಹೊಂದಿರುವುದು - ಪರಸ್ಪರ ಸಂಬಂಧವಿರುವ ಸಂಗತಿಗಳು.

ಉಷ್ಣತೆಯ ನಿಯಂತ್ರಣದಲ್ಲಿ ದೇಹದಲ್ಲಿರುವ ಘಟಕಾಂಶಗಳ ಪೈಕಿ ನೀರು ಮತ್ತು ಕೊಬ್ಬಿನ ಪಾತ್ರ ಹಿರಿದು. ಏಕೆಂದರೆ ಇವೆರಡೂ ಉಷ್ಣದ ಅವಾಹಕಗಳು. ಒಂದು ಖಾಲಿ ಡಬ್ಬಿ ಹಾಗೂ ಎರಡು ಡಬ್ಬಿಗಳಲ್ಲಿ ಅನುಕ್ರಮವಾಗಿ ನೀರು, ಎಣ್ಣೆ ತುಂಬಿ ಇರಿಸಿ. ಆಗ ಖಾಲಿ ಡಬ್ಬಿ ಹೆಚ್ಚು ಬಿಸಿಯಾಗಿರುವುದನ್ನು ನೀರು ಸೇರಿರುವ ಡಬ್ಬಿ ಕೊಂಚ ಬಿಸಿಯಾಗಿರುವುದನ್ನು ಮತ್ತು ಕೊಬ್ಬಿರುವ ಡಬ್ಬಿ ಅತ್ಯಲ್ಪ ಬಿಸಿಯಾಗಿರುವುದನ್ನು ಕಾಣುವಿರಿ. ಮರಳುಗಾಡಿನ ಒಂಟೆಯ ದೇಹದಲ್ಲಿ ಹೆಚ್ಚು ಕೊಬ್ಬು ಇರುವುದರಿಂದ ಪ್ರಖರ ಉಷ್ಣದಲ್ಲೂ ಅದು ತನ್ನ ಉಷ್ಣತೆಯನ್ನು ಸ್ಥಿರವಾಗಿಟ್ಟುಕೊಳ್ಳಬಲ್ಲದು.

ಕೊಬ್ಬಿನಷ್ಟಲ್ಲದಿದ್ದರೂ ತಾನು ದೇಹದಲ್ಲಿರುವಾಗ ಹಾಗೂ ದೇಹದಿಂದ ಬೆವರಿನ ರೂಪದಲ್ಲಿ ಹೊರ ಹೋಗುವಾಗ ದೇಹದ ಉಷ್ಣತೆ ಹೆಚ್ಚಾಗದಂತೆ ನೀರು ನೋಡಿಕೊಳ್ಳಬಲ್ಲದು. ಆದ್ದರಿಂದ, ಡಬ್ಬಿಯಲ್ಲಿರುವ ನೀರಿಗಿಂತ ದೇಹದಲ್ಲಿರುವ ನೀರು ಹೆಚ್ಚು ದಕ್ಷವಾಗಿ ಉಷ್ಣವನ್ನು ಹೊರಹಾಕಿ ದೇಹವನ್ನು ತಂಪಾಗಿಸಲಬಲ್ಲದು. ನೀರು ಉಷ್ಣದ ಅವಾಹಕವಲ್ಲದೆ, ಅದರ ಬಾಷ್ಪೀಕರಣ ಗುಪ್ತೋಷ್ಣ ಅರ್ಥಾತ್ ಆವಿಯಾಗಲು ಬೇಕಾಗುವ ಉಷ್ಣ ಸಾಕಷ್ಟು ಹೆಚ್ಚಾಗಿರುವುದೇ ಈ ಸ್ಥಿತಿಗೆ ಕಾರಣ.

ಕೋಪ ಬಂದಾಗ, ಹೊರಗಣ ಉಷ್ಣತೆಗೆ ಹೊಂದಿಕೊಳ್ಳ ಹೋಗಿ ದೇಹದ ಉಷ್ಣತೆ ಹೆಚ್ಚಿದಾಗ, ದೇಹದ ಆಂತರಿಕ ಕ್ರಿಯೆಯಲ್ಲಿ ಏರುಪೇರಾಗಿ ಜ್ವರ ಬಂದ ಅನಂತರ ಮಾಮೂಲಿ ಸ್ಥಿತಿ ತಲುಪುವ ಹಂತದಲ್ಲಿ ಬೆವರುವಿಕೆ ಹೆಚ್ಚು. ಗಾಳಿ, ಬೀಸಿ ಬೆವರು ಆವಿಯಾದಾಗ ದೇಹ ತಂಪಾಗುವುದು. ಜ್ವರ ಬಿಡುವ ಹಂತದಲ್ಲಿ ದೇಹವಿಡೀ ಗಾಳಿಯಾಡುವಂತೆ ಇರಬೇಕು. ಜ್ವರದ ರೋಗಿ ಬೆಚ್ಚಗೆ ಹೊದ್ದು ಮಲಗಿದರೆ ಉಷ್ಣ ಹೊರಹಾಕಲು ಅಡ್ಡಿಯಾಗಿ ಜ್ವರದ ಪರಿಣಾಮ ಪ್ರತಿಕೂಲವಾಗುವುದು. ಜ್ವರ ಬಂದು ಬೆಚ್ಚಗೆ ಹೊದಿಸಿ ಮಲಗಿದಾಗಲೇ ಸಣ್ಣ ಮಕ್ಕಳಿಗೆ ಸನ್ನಿ ಬರುತ್ತದೆ. ಇದಕ್ಕೆ ಕಾರಣ ಉಷ್ಣ ಹೊರಹೋಗಲು ಅವಕಾಶವಿಲ್ಲದೆ ಮಿದುಳಿನ ಉಷ್ಣತೆ ಏರುಪೇರಾಗುತ್ತದೆ. ಬೆಚ್ಚಗೆ ಹೊದಿಸುವ ಬದಲು ತಲೆಗೆ ತಣ್ಣೀರು ಬಟ್ಟೆ ಹಾಕುವುದು, ಮಂಜುಗಡ್ಡೆ ಇಡುವುದು ವಾಸಿ. ಆದರೆ ಶೀತವಾದೀತೆಂಬ ಭಯಕ್ಕೆ ಅನೇಕರು ಹಾಗೆ ಮಾಡದೆ, ಬೆಚ್ಚಗೆ ಹೊದಿಸಿ ಮಕ್ಕಳ ಸನ್ನಿಗೆ ಕಾರಣವಾಗುತ್ತಾರೆ. ದೊಡ್ಡವರು ಜ್ವರದ ತಾಪದಿಂದ ಹೊರಬರಲೂ ಇದು ಅಡ್ಡಿ.

ದೇಹದ ಉಷ್ಣತೆ ಹೆಚ್ಚಿದರೆ ಬೆವರುವಿಕೆ ಪರಿಹಾರ. ದೇಹದ ಉಷ್ಣತೆ ತಗ್ಗುವ ಪ್ರಸಂಗ ಬಂದರೆ? ಆಗ ದೇಹವು ಹೆಚ್ಚು ಉಷ್ಣವನ್ನು ಉತ್ಪಾದಿಸಿ ಉಷ್ಣದ ನಷ್ಟವನ್ನು ತುಂಬಿ ಕೊಳ್ಳಬೇಕು. ಇದರ ಸಲುವಾಗಿ ದೇಹದ ಜೀರ್ಣಕ್ರಿಯೆ ವೇಗವಾಗಿ ನಡೆಯುವುದು. ಬೆವರುವಿಕೆ ಕಡಿಮೆಯಾಗಿ ಉಷ್ಣದ ನಷ್ಟ ಕಡಿಮೆಯಾಗುವುದನ್ನು ತಪ್ಪಿಸಲು ಮೂತ್ರ ವಿಸರ್ಜನೆ ಮೂಲಕ ನೀರು ಹೊರಹೋಗುವುದು. ಮೈನಡುಕದ ಯಾಂತ್ರಿಕ ಕ್ರಿಯೆಯ ಮೂಲಕ ದೇಹ ಉಷ್ಣವನ್ನು ಉತ್ಪಾದಿಸಿಕೊಳ್ಳುವುದು ಮಾಮೂಲು. ಅಂದ ಮೇಲೆ ಮೈ ನಡುಕವು ದೇಹದ ಉಷ್ಣ ಉತ್ಪಾದನಾ ವಿಧಾನ.

ಉಷ್ಣವನ್ನು ಹೊರಹಾಕಲು ಬೆವರುವಿಕೆ, ಉಷ್ಣವನ್ನು ಉತ್ಪಾದಿಸಲು ಮೈ ನಡುಕ, ಪ್ರಧಾನ ತಂತ್ರಗಳು ಎಂದಾಯಿತು.

ಆದರೆ, ಜ್ವರ ಬಂದಾಗ ಬೆವರುವಿಕೆ, ಮೈ ನಡುಕಗಳೆರಡೂ ಕಾಣಬರುವುದೇಕೆ?

ಜ್ವರದ ಆರಂಭಿಕ ಹಂತದಲ್ಲಿ ದೇಹದ ಉಷ್ಣತೆ ಹೆಚ್ಚುತ್ತಿರುವ ಸ್ಥಿತಿಯಲ್ಲಿ ಅದೇ ಉಷ್ಣತೆಯನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಆಗ ಜ್ವರದ ಬಿಸಿಯಿಂದ ಪರಿಸರಕ್ಕೂ, ದೇಹಕ್ಕೂ ಉಷ್ಣತೆಯ ಅಂತರ ಹೆಚ್ಚಿ ಉಷ್ಣದ ಸೋರಿಕೆ ಹೆಚ್ಚಾಗಿ ಆ ಉಷ್ಣದ ನಷ್ಟವನ್ನು ಭರಿಸಲು ದೇಹ ಕಂಪಿಸುತ್ತದೆ. ಕಂಪನದಿಂದ ದೇಹದ ಉಷ್ಣತೆ ಹೆಚ್ಚಿನ ಮಟ್ಟದಲ್ಲೇ ಉಳಿಯಲು ಸಹಾಯಕ. ಮಲೇರಿಯಾ ಜ್ವರದಲ್ಲಿ ಇದು ಸಾಮಾನ್ಯ. ಜ್ವರ ಕಡಿಮೆಯಾಗುತ್ತಿದ್ದಂತೆ, ದೇಹ ಮಾಮೂಲಿ ಉಷ್ಣತೆಗೆ ಹಿಂತಿರುಗಲು ಹೆಚ್ಚಿನ ಉಷ್ಣವನ್ನು ಹೊರಹಾಕಬೇಕಷ್ಟೇ. ಆಗ ಮೈ ಬೆವರುವಿಕೆ ಜಾಸ್ತಿಯಾಗುತ್ತದೆ. ಉಷ್ಣರಕ್ತ ಜೀವಿಗಳ ದೇಹವು ತನ್ನ ಉಷ್ಣತೆಯನ್ನು ಸ್ಥಿರವಾಗಿರಿಸಿಕೊಳ್ಳಲು ಅನೇಕ ತಂತ್ರಗಳನ್ನು ಬಳಕೆ ಮಾಡುತ್ತವೆ ಎಂಬುದನ್ನು ಅರಿತೆವು. ಈ ಪ್ರಧಾನಕ್ರಿಯೆ ಅಲ್ಲದೆ ಅನೇಕ ಸಣ್ಣ ಪುಟ್ಟ ಕ್ರಿಯೆಗಳೂ ಇದಕ್ಕೆ ಪೂರಕವಾಗಿ ನಡೆಯುವುದುಂಟು. ಇವುಗಳಲ್ಲಿ ಎರಡನ್ನು ಪ್ರಾಸಂಗಿಕವಾಗಿ ಪರಿಗಣಿಸೋಣ.

ಭೀಕರ ದೃಶ್ಯ, ಮೈ ತಲ್ಲಣಗೊಳಿಸುವ ಪ್ರಸಂಗದಲ್ಲಿ ಮೈನವಿರೇಳದಿರುವವರೂ ಇರಬಹುದು. ಆದರೆ ಚಳಿಗಾಲದಲ್ಲಿ ಮೈನವಿರೇಳದೆ ಇರುವುದೇ ಇಲ್ಲ. ರೋಮ ತಳಭಾಗದಲ್ಲಿ ಗುಳ್ಳೆಗಳೇಳುವುದು. ರೋಮ ನೀಳವಾಗುವುದು, ಚಳಿಯಾದಾಗ ಮಾಮೂಲು ಅನುಭವ. ಹೀಗಾದಾಗ ರೋಮಗಳ ನಡುವೆ ಗಾಳಿ ಸೆರೆಯುಂಟಾಗಿ ಗಾಳಿಯ ಅನುಷ್ಣ ವಾಹಕತೆಯಿಂದ ದೇಹದ ಉಷ್ಣ ಸೋರಿಕೆ ಕಡಿಮೆಯಾಗುತ್ತದೆ.

ನಾಯಿಗಳು ನಾಲಿಗೆ ನೀಡಿ ಜೊಲ್ಲು ಸುರಿಸುವುದನ್ನು ಚಿತ್ರದಲ್ಲಿ, ನೇರವಾಗಿ ಅನೇಕ ವೇಳೆ ನೋಡಿರುತ್ತೇವೆ. ಈ ಪ್ರವೃತ್ತಿ ಬೇಸಿಗೆಯಲ್ಲಿ ಜಾಸ್ತಿಯಾಗಿರುತ್ತದೆ ಎಂಬುದನ್ನು ಗಮನಿಸಿರುವುದಿಲ್ಲ. ಆದರೂ ಇದು ನಿಜ. ಹೀಗೇಕೆ! ನಾಯಿಯ ಚರ್ಮದಲ್ಲಿ ಸ್ವೇದಗ್ರಂಥಿಯಿಂದ ಬೆವರು ಹೊರಬಂದು ದೇಹದ ಉಷ್ಣತೆ ಕಡಿಮೆಯಾಗುವ ಬದಲು, ನಾಯಿಯ ನಾಲಿಗೆಯ ಮೇಲೆ ಅದರ ಜೊಲ್ಲು ಆವಿಯಾಗಿ ಅದರ ದೇಹದ ಉಷ್ಣ ನಷ್ಟವಾಗಿ ದೇಹದ ಉಷ್ಣತೆ ಹೆಚ್ಚಾಗದಂತೆ ನೋಡಿಕೊಳ್ಳಲು ಉಪಯುಕ್ತವಾದ ಕ್ರಿಯೆ ಇದು. ಬೇಸಗೆಯಲ್ಲಿ ಉಷ್ಣ ಹೆಚ್ಚು ನಷ್ಟವಾಗಬೇಕು. ಆದ್ದರಿಂದ ಜೊಲ್ಲು ಸುರಿಸುವಿಕೆಯೂ ಹೆಚ್ಚು. ●

# ಕರ್ಮಬಂಧದಿಂದ ಬಿಡುಗಡೆ

('ಗೀತಾರ್ಥಸರ್ವಸ್ವ' ಎಂಬ ಗ್ರಂಥದಿಂದ)


ಭಗವದ್ಗೀತೆಯಲ್ಲಿರುವ ``ಕರ್ಮಣ್ಯೇವಾಧಿಕಾರಸ್ತೇ'' ಎಂಬ ಶ್ಲೋಕದ ಅಭಿಪ್ರಾಯವನ್ನು ಈಗ ವಿಚಾರಮಾಡೋಣ. ಈ ಶ್ಲೋಕದ ಒಂದೊಂದು ಪಾದದಲ್ಲಿಯೂ ಒಂದೊಂದು ಅಮೋಘತತ್ವವನ್ನು ಉಪದೇಶಿಸಿದೆ. ``ಕರ್ಮದಲ್ಲಿಯೇ ನಿನಗೆ ಅಧಿಕಾರವು'' ಎಂಬದು ಮೊದಲನೆಯ ಉಪದೇಶವಾಗಿದೆ. ಅರ್ಜುನನು ಯುದ್ಧದಲ್ಲಿ ಅನೇಕರನ್ನು ಕೊಂದು ಪಾಪವನ್ನು ಕಟ್ಟಿಕೊಳ್ಳುವದಕ್ಕಿಂತಲೂ ಕರ್ಮಸಂನ್ಯಾಸವನ್ನು ಮಾಡಿ ಬ್ರಾಹ್ಮಣನಂತೆ ಭಿಕ್ಷಾಚರ್ಯೆಯಿಂದ ಜೀವಿಸುವದೇ ಲೇಸೆಂದು ತಿಳಿದಿದ್ದನು. ಇದು ತಪ್ಪೆಂದು ತಿಳಿಸುವದಕ್ಕಾಗಿ ಭಗವಂತನು ಈ ಮೊದಲನೆಯ ಉಪದೇಶವಾದ `ನಿನಗೆ ಕರ್ಮದಲ್ಲಿಯೇ ಅರ್ಹತೆ' ಎಂಬ ಮಾತನ್ನಾಡಿರುತ್ತಾನೆ. ರಾಜ್ಯಪರಿಪಾಲನವು ಕ್ಷತ್ರಿಯರಿಗೆ ಮೊದಲನೆಯ ಕರ್ತವ್ಯವು. ಅದನ್ನು ಬಿಟ್ಟು ಬ್ರಾಹ್ಮಣನಂತೆ ತಿರಿದು ಉಣ್ಣುವದು ರಾಜಕುಲದಲ್ಲಿ ಹುಟ್ಟಿದ ನಿನಗೆ ಬಹಳ ಅನುಚಿತವಾದದ್ದು - ಎಂಬ ಮಾತನ್ನು ಧರ್ಮರಾಯನಿಗೂ ಒಂದು ಸಂದರ್ಭದಲ್ಲಿ ವೇದವ್ಯಾಸರು ಹೇಳಿರುತ್ತಾರೆ. ಲೋಕದಲ್ಲಿ ಆತ್ಮಜ್ಞಾನವಿಲ್ಲದ ಜನರು ಶೋಕ ಮೋಹಗಳಿಂದ ಕೂಡಿದವರಾಗಿ ತಾವು ಮಾಡತಕ್ಕದ್ದು ಯಾವದು, ಬಿಡತಕ್ಕದ್ದು ಯಾವದು? ಎಂಬ ವಿವೇಕವಿಲ್ಲದೆ ಸಂಕಟಪಡುತ್ತಿರುವರು. ಇದರಂತೆಯೇ ಅರ್ಜುನನ ಸ್ಥಿತಿಯೂ ಆಗಿತ್ತಾದ್ದರಿಂದ ಅವನ ಭ್ರಾಂತಿಯನ್ನು ಹೋಗಲಾಡಿಸುವುದಕ್ಕಾಗಿಯೇ ಅವನಿಗೆ ಅತ್ಯಂತ ಹಿತವಾದ ಕರ್ಮಯೋಗವನ್ನುಪದೇಶಿಸಲಾರಂಭಿಸಿ ಕರ್ಮಯೋಗ ಸೋಪಾನದ ಮೊದಲನೆಯ ಮೆಟ್ಟಿಲಾಗಿ `ನಿನಗೆ ಕರ್ಮದಲ್ಲಿಯೇ ಅಧಿಕಾರವು' ಎಂಬ ಬೋಧೆಯನ್ನು ನೀಡಿರುತ್ತಾನೆ. ಅರ್ಜುನನು ಕರ್ಮವನ್ನು ಮಾಡುವದು ಯುಕ್ತವೇ ಹೊರತು ಸಂನ್ಯಾಸವನ್ನು ಅಂಗೀಕರಿಸುವದೇನೂ ಯುಕ್ತವಲ್ಲ ಎಂಬುದೇ ಈ ಚರಣದ ತಾತ್ಪರ್ಯವು.

``ನಿನಗೆ ಫಲಗಳಲ್ಲಿ ಸಂಬಂಧವಿರದೆ ಇರಲಿ'' ಎಂಬುದು ಎರಡನೆಯ ಚರಣವು. ಅರ್ಜುನನು ಯುದ್ಧಕ್ಕೆ ಸಿದ್ಧನಾಗಿದ್ದನಾದರೂ ಗುರುಹಿರಿಯರನ್ನು ಕೊಂದರೆ ಅದರಿಂದಾಗುವ ದುಃಖಕ್ಕೆ ಯಾರು ಹೊಣೆ? ಹಾಗೂ ಗುರುಹಿರಿಯರಿಲ್ಲದ ಬಂಧು ಮಿತ್ರರಿಲ್ಲದ ರಾಜ್ಯದಲ್ಲಿ ಏನು ಸುಖ? ಇದರಿಂದ ನಮಗೆ ನಷ್ಟವೊ? ಲಾಭವೊ? ಹೇಗೆ ಹೇಳುವದು? ಸೋತರೂ ಗೆದ್ದರೂ ಉಭಯವಿಧದಿಂದಲೂ ಸಂಕಟಕ್ಕೇ ಸಿಕ್ಕಿಕೊಳ್ಳುವೆನಲ್ಲ? ಎಂದು ಅವನ ಮುಖ್ಯವಾದ ಯೋಚನೆಯಾಗಿತ್ತು. ಇದನ್ನು ಪರಿಹರಿಸುವದಕ್ಕೆ ಭಗವಂತನು ``ಕರ್ಮಫಲಕ್ಕೆ ನೀನು ಸಂಬಂಧವಿಲ್ಲದವನಾಗಿರು. ಸುಖ ದುಃಖ ಲಾಭಾಲಾಭಜಯಾಪಜಯಗಳನ್ನು ಸಮವೆಂದು ತಿಳಿದು ಯುದ್ಧವನ್ನು ಮಾಡು ಎಂದು ಹೇಳಿದನು. ಇದೇ ಎರಡನೆಯ ಚರಣದ ಅಭಿಪ್ರಾಯವು.

ಕರ್ಮವನ್ನು ಮಾಡಿದರೂ ಫಲವನ್ನು ಅಂಟಿಸಿಕೊಳ್ಳಬೇಡವೆಂಬುದು ವಿರುದ್ಧವಾದ ಮಾತಲ್ಲವೆ? ಕರ್ಮವನ್ನು ಮಾಡಿದರೆ ಫಲಕ್ಕಾದರೂ ಸಿದ್ಧನಾಗಬೇಕು. ಇಲ್ಲದಿದ್ದರೆ ಕರ್ಮದ ಹವ್ಯಾಸವನ್ನಾದರೂ ಬಿಡಬೇಕು ಎಂದು ನಮಗೆ ತೋರಬಹುದು. ಈ ಅಭಿಪ್ರಾಯವನ್ನು ದೂರಮಾಡುವದಕ್ಕೆಂದು ಭಗವಂತನು ``ಮಾ ಕರ್ಮಫಲಹೇತುರ್ಭೂಃ'' (ಕರ್ಮಗಳ ಫಲಕ್ಕೆ ಕಾರಣನಾಗಬೇಡ) ಎಂದು ಬೋಧಿಸಿದ್ದಾನೆ. ಕರ್ಮವನ್ನು ಮಾಡಿದರೂ ಅದರ ಫಲವು ನಮ್ಮನ್ನು ಕಾಡದಂತೆ ಮಾಡಿಕೊಳ್ಳುವ ಉಪಾಯವು ಒಂದಿದೆ. ತುರುಚಿಯ ಸೊಪ್ಪನ್ನು ಮುಟ್ಟಿದರೆ ಅದು ಕೈಗೆ ಚುಚ್ಚಿಕೊಳ್ಳುವುದು. ಆದರೆ ಅದನ್ನೇ ಬಳಸಿ ತೈಲವನ್ನು ಮಾಡುವವರೂ ಇದ್ದಾರೆ. ಅಂಥವರಿಗೆ ಇದನ್ನು ಕಂಡರೆ ಆನಂದವೇ ಆದೀತು. ಹಾಗೆಯೇ ಕರ್ಮವನ್ನು ಸಾಮಾನ್ಯರು ಮಾಡುವ ರೀತಿಯಿಂದ ಮಾಡಿದರೆ ಸುಖ ದುಃಖ ಫಲಗಳನ್ನು ಉ ಕೊಡುವ ಕರ್ಮಗಳೇ ಇನ್ನೊಂದು ಬಗೆಯಿಂದ ಮಾಡಿದರೆ ಯಾವ ಕೆಲಸದ ಫಲದ ಸಂಬಂಧವನ್ನೂ ಕೊಡದೆ ಹೋಗುವವು. ಆದ್ದರಿಂದ ಕರ್ಮಗಳನ್ನು ಮಾಡಿದರೂ ಫಲವು ನಮ್ಮ ಕೊರಳಿಗೆ ಬೀಳದಂತೆ ನೋಡಿಕೊಳ್ಳುವುದೇ ನಮ್ಮ ಉದ್ದೇಶವಾಗಿರಬೇಕೆಂದು ಮೂರನೆಯ ಚರಣದ ಅಭಿಪ್ರಾಯ.

ಕರ್ಮಗಳನ್ನೂ ಮಾಡಿ ಫಲವನ್ನೂ ಬಿಡುವದಕ್ಕೆ ಬೇರೆ ಶ್ರಮಪಡಬೇಕಾಗುವ ಮಾರ್ಗಕ್ಕಿಂತ ಕರ್ಮವನ್ನೇ ಕೈಬಿಡುವದು ಲೇಸು ಎಂದು ಅಲ್ಪರಿಗೆ ಸಹಜವಾಗಿ ತೋರುತ್ತದೆ. ಕರ್ಮಗಳನ್ನು ಬಿಡುವದು ಅಷ್ಟು ಸುಲಭವಲ್ಲವೆಂದೂ ಶಾಸ್ತ್ರೋಕ್ತವಾದ ಕೆಲವು ಕರ್ಮಗಳನ್ನೇನೋ ಬಿಡಬಹುದಾದರೂ ಅದರಿಂದ ನಮಗೆ ಸುಖವಾಗುವಬದಲು ಮಾಡಬೇಕಾದದ್ದನ್ನು ಬಿಟ್ಟು ಮಾಡಬಾರದ ಕರ್ಮವನ್ನು ಮಾಡಿದರೆ ತಪ್ಪೇ ಸಂಭವಿಸುವದೆಂಬುದನ್ನೂ ಅವರು ಅರಿಯರು. ಆದ್ದರಿಂದ `ಮಾ ತೇ ಸಂಗೋಽಸ್ತ್ವಕರ್ಮಣಿ' (ಕರ್ಮಗಳನ್ನು ಬಿಡುವದರಲ್ಲಿ ನಿನಗೆ ಆಸಕ್ತಿಯುಂಟಾಗದಿರಲಿ) ಎಂದು ಭಗವಂತನು ಉಪದೇಶಿಸಿರುತ್ತಾನೆ. ಕರ್ಮದ ಕಟ್ಟನ್ನು ಕಳಚಿಕೊಳ್ಳಬೇಕೆಂಬುದು ನಮಗೆಲ್ಲ ಇಷ್ಟವೇ ಆದದ್ದು. ಇದರಲ್ಲಿ ಜಯಶೀಲರಾಗುವ ಸ್ಥಿತಿಗೆ `ನೈಷ್ಕರ್ಮ್ಯ'ವೆಂದು ಹೆಸರು. ಮನುಷ್ಯನ ಪ್ರಯತ್ನವೆಲ್ಲವೂ ಈ ಸ್ಥಿತಿಯನ್ನು ಪಡೆದುಕೊಳ್ಳುವದಕ್ಕೇ ಉಂಟಾಗಿದೆ ಎಂಬುದು ಗೀತೆಯ ಸಿದ್ಧಾಂತವಾಗಿದೆ. ಇದಕ್ಕಾಗಿಯೇ ಯೋಗಬುದ್ಧಿಯನ್ನು ಭಗವಂತನು ಉಪದೇಶಿಸಿರುತ್ತಾನೆ. ಕರ್ಮದ ಕಟ್ಟನ್ನು ತಪ್ಪಿಸಿ ಕೊಳ್ಳಬೇಕೆಂಬ ಇಚ್ಛೆಯಿದ್ದರೆ ಕರ್ಮವನ್ನು ಬಿಟ್ಟು ಕೂರುವ ಯೋಚನೆ ಮಾಡಬೇಡ. ಕರ್ಮಗಳಲ್ಲಿಯೇ ತೊಡಗು ಎಂದು ತಿಳಿಸುವದೇ 'ಮಾ ತೇ ಸಂಗೋಽಸ್ತ್ವಕರ್ಮಣಿ' ಎಂಬ ಶ್ಲೋಕಪಾದದ ಮುಖ್ಯೋದ್ದೇಶವಾಗಿರುತ್ತದೆ. ಇದಕ್ಕೆ ಕಾರಣವನ್ನು ಮೂರನೆಯ ಅಧ್ಯಾಯದಲ್ಲಿ ವಿವರಿಸಿಯೂ ಇದೆ. ಶಂಕರಾಚಾರ್ಯರು ಹೇಳಿರುವಂತೆ ``ಕರ್ಮಾರಂಭಸ್ಯೈವ ನೈಷ್ಕರ್ಮ್ಯೋಪಾಯತ್ವಾತ್'' ಕರ್ಮಗಳನ್ನು ಮಾಡತೊಡಗುವದೇ ನೈಷ್ಕರ್ಮ್ಯಕ್ಕೆ ಮೊದಲನೆಯ ಸಾಧನವಾಗಿರುತ್ತದೆ.

## ಅಭಿನಂದನೆ



ಅಸೋಸಿಯೇಷನ್ನಿನ ಸದಸ್ಯರಾದ ಶ್ರೀ ಸುಬ್ಬಣ್ಣ ಅವರ ಮಗ ಚಿ ಶ್ರೀವತ್ಸ ಸುಬ್ಬಣ್ಣ ಈ ಬಾರಿಯ H.S.C. ಪರೀಕ್ಷೆಯಲ್ಲಿ ಶೇಕಡ 88 ಅಂಕಗಳನ್ನು ಒಟ್ಟಾರೆಯಾಗಿಯೂ, ಶೇಕಡ 93 ಅಂಕಗಳನ್ನು ವಿಜ್ಞಾನ ಮತ್ತು ಗಣಿತದಲ್ಲಿ ಗಳಿಸಿದ್ದಾನೆ. ಅವನಿಗೆ 'ನೇಸರು' ಶುಭಾಶಯ ಕೋರುತ್ತದೆ.

'ಜ್ಞಾನ ಪೀಠ' ಪ್ರಶಸ್ತಿ ವಿಜೇತ ಕನ್ನಡಿಗರು 5

## 'ವಿನಾಯಕರ ಭಾರತ ಸಿಂಧು ರಶ್ಮಿ ಮತ್ತು ಸಮಕಾಲೀನತೆ'

(ಪುಟ 7ರಿಂದ)

ಇಳೆಯಿತ್ತ ಸೌಭಾಗ್ಯ - ಭೋಗ್ಯಗಳನ್ನೆಲ್ಲ ಮರೆದು
ದೌರ್ಭಾಗ್ಯನಂತೆ ಶೂನ್ಯದೊಳಲೆವುದೆಂಥ ಛಲವು!"
(2-539)

ಎಂದು ಸಂದಿಗ್ಧಕ್ಕೊಳಗಾಗುತ್ತಾನೆ. ಮತ್ತೆ ಅನಾಥ ಪ್ರಜ್ಞೆ ಅವನನ್ನು ಮುತ್ತಿ ಕೊಳ್ಳುತ್ತದೆ. ಇದು ವಿಶ್ವಾಮಿತ್ರನ ಗಮನಕ್ಕೆ ಬರುತ್ತದೆ.

``ಸತ್ಯವ್ರತನೆ ಸಂಕಲ್ಪ ಚಲಿಸದಿರು
ಗೆಲಿದು ಪೂರ್ವಾರ್ಥವನು ಸೋಲುವರೆ ಉತ್ತರಾರ್ಧ?
ಹಿಂದಿರುಗುವವ ಹೇಡಿ ಸಂಯಮಿಸು ಸಂಕ್ರಮಿಸು
ಭೂಮಿ ಮುಗಿಲಿಗೆ ಮಿಗಿಲೆ ಪಾದವಾಗುವುದೆ ಮೂರ್ಧ
ಉದ್ ಬುದ್ಧನಾಗದಿರೆ ಮರುಳಗಾಡೊಳು ಭ್ರಮಿಸಿರು"
- (2-540)

ಎಂದು ಸತ್ಯವ್ರತನನ್ನು ಮೇಲಕ್ಕೆ ಒತ್ತುತ್ತಾನೆ. ಸತ್ಯವ್ರತ ಚಿತ್ರಹಿಂಸೆಗೊಳಗಾಗುತ್ತಾನೆ. ಇತ್ತ ಕುಸುಮವೂ ಇಲ್ಲ, ಅತ್ತ ತಾರಕೆಯೂ ಇಲ್ಲ. ``ನನಗಿದು ಘೋರತಮ ಪಾಪಗಳಿಗೆ ಶಿಕ್ಷೆ" ಭೂಮಾತೆ ನನ್ನನ್ನು ತ್ಯಜಿಸಿದಳು, ವ್ಯೋಮ ನನ್ನ ಹಂಗಿಸಿತು ನನಗಾದ ದೆಸೆಯಿನ್ನು ನನಗಾವ ಮಾರ್ಗ. ನನ್ನ ಪ್ರೇಮವನ್ನೆಲ್ಲ ಕೃಷ್ಣ ಪಕ್ಷ ನುಂಗುತ್ತಿದೆ ಎಂದು ಪೇಚಾಡುತ್ತಾನೆ.

ವಿನಾಯಕರ ಭಾರತ ಸಿಂಧು ರಶ್ಮಿ ಮಹಾಕಾವ್ಯದಲ್ಲಿ `ತ್ರಿಶಂಕುವಿನ ಪ್ರಜ್ಞಾಕಾಂಡ' ಒಂದು ರಸಘಟ್ಟ, ಗಂಭೀರವಾದ, ಅಷ್ಟೇ ಕರುಣಾಜನಕವಾದ, ಓದುಗನ ಕರುಳನ್ನು ಹಿಂಡುವ ಒಂದು ಪ್ರಸಂಗ. ವಿನಾಯಕರ ಕವಿ ಪ್ರತಿಭೆ ಇಲ್ಲಿ ಮಿಂಚಿದೆ. ಆಧುನಿಕ ವಿಮರ್ಶಕರು ಗುರುತಿಸುವ ಅನಾಥ ಪ್ರಜ್ಞೆ (Alienation)ಯೇ ಇಲ್ಲಿಯ ತ್ರಿಶಂಕು ಸ್ಥಿತಿ. ಬಹುತೇಕ ನಮ್ಮ ಕವಿಗಳನ್ನು ಇದು ಕಾಡಿದೆ. ಸ್ವತಃ ವಿನಾಯಕರೇ ತ್ರಿಶಂಕು ಸ್ಥಿತಿಯಿಂದ ಬಳಲಿದ್ದಾರೆ. ವಿದೇಶದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗ ನಾನು ಇಲ್ಲಿಗೆ ಬಂದು ಸಾಧಿಸಬೇಕಾದದ್ದೇನನ್ನು? ಎಂದು ಪ್ರಶ್ನಿಸಿ ಕೊಳ್ಳುತ್ತಾರೆ (ವಿನಾಯಕರ ಸಮುದ್ರಗೀತ). ಆಧುನಿಕ ಮಾನವರಾರೂ ಇದಕ್ಕೆ ಹೊರತಾಗಿಲ್ಲ. ಇದು ಯಾಂತ್ರಿಕಯುಗದ ಕೂಸು. ಅನ್ಯಮಿಂದ್ರ ಕರಿಷ್ಯಾಮಿ ಎಂದು ವಿಶ್ವಾಮಿತ್ರ ಪ್ರತಿ ಸೃಷ್ಟಿಯಲ್ಲಿ ತೊಡಗುತ್ತಾನೆ. ಅದರಿಂದಾಗುವ ಅನರ್ಥಗಳನ್ನು ತಿಳಿಹೇಳಿ ಬ್ರಹ್ಮ ವಿಶ್ವಾಮಿತ್ರನನ್ನು ಸಮಾಧಾನ ಪಡಿಸುತ್ತಾನೆ. ಬ್ರಹ್ಮನ ಮಾತಿನಲ್ಲಿ ಸತ್ಯಾಂಶವಿದೆ ಎಂದರಿತು ಆತ ಸಮಾಧಾನ ತಾಳಿ ಮತ್ತೆ ತಪಸ್ಸಿಗೆ ತೆರಳುತ್ತಾನೆ. ಪ್ರಜಾಪತಿಯೂ ಅವನನ್ನು ಹಿಂಬಾಲಿಸುತ್ತಾನೆ.

ವಿಶ್ವಾಮಿತ್ರನ ಕಥೆಗೆ ತಳುಕು ಹಾಕಿಕೊಂಡ ಮತ್ತೊಂದು ಘಟನೆ ಶುನಃ ಶ್ಯೇಪನದು. ನರಮೇಧ ಯಾಗದಲ್ಲಿ ಬಲಿಯಾಗಬೇಕಾಗಿದ್ದ ಅವನನ್ನು ವಿಶ್ವಾಮಿತ್ರರು ಬದುಕಿಸಿ ತಮ್ಮ ಪುತ್ರನನ್ನಾಗಿ ಮಾಡಿಕೊಳ್ಳುತ್ತಾರೆ. ವಿಶ್ವಾಮಿತ್ರ ಕೋಪಿಷ್ಠನೇನೋ ಹೌದು. ಆದರೆ ಹೆಸರಿಗೆ ತಕ್ಕಂತೆ ಆತ ಎಲ್ಲರಿಗೂ ಸಹಾಯ ಮಾಡುತ್ತಾನೆ. ಅವನಿಂದ ಉಪಕೃತರಾದವರು ಬಹಳ ಮಂದಿ. ನೂರು ವರ್ಷ ತುಂಬಿದ ಸಂದರ್ಭದಲ್ಲಿ ಅವರಿಗೆ ಮೃತ್ಯುಂಜಯ ಯಜ್ಞ ಮಾಡಲಾಗುತ್ತದೆ. ತಮ್ಮ ಕಾಲ ಮುಗಿಯಿತೆಂಬ ಅರಿವು ವಿಶ್ವಾಮಿತ್ರರಿಗೆ ಗೊತ್ತಾಗಿ ಒಂದು ದಿನ ನಿರ್ವಾಣ ಹೊಂದಿ ಸಪ್ತರ್ಷಿ ಮಂಡಲದಲ್ಲಿ ನಕ್ಷತ್ರವಾಗಿ ಲೀನವಾಗುತ್ತಾರೆ. ಕವಿ ಕಾವ್ಯದ ಪ್ರಾರಂಭದಲ್ಲೇ ಅವನ ಸಾಧನೆಯನ್ನು ಪಟ್ಟಿ ಮಾಡುತ್ತಾರೆ. ``ಭಾರತ ಕುಲದ ರಾಜನ್ಯ ವಿಶ್ವರಥ ಸಮಷ್ಟಿಯ ಶಿಲ್ಪಿ ಯುಗ ಪ್ರವರ್ತಕ ಪುರುಷ ಗಾಯತ್ರಿ ಮಂತ್ರದ ದ್ರಷ್ಟಾರ, ವಿಶ್ವಾಮಿತ್ರ ಎಂದು ಬ್ರಹ್ಮ ಪದವಿಯ ಪಡೆಯುತ. ವಿಕಾರ ವಶ ಸೃಷ್ಟಿಯ ಸೃಜಿಸಿ ತ್ಯಜಿಸಿದನು". ವಿಶ್ವಾಮಿತ್ರನನ್ನೆ ಪುನರ್ ನಿರ್ಮಿಸಿದೆ ಕೃತಿಯಲ್ಲಿ ಹೇಳಿಕೊಂಡಿದ್ದಾರೆ.

ಭಾರತ ಸಿಂಧೂ ರಶ್ಮಿ ಒಂದು ಮಹಾಕಥಾ ಸರಿತ್ಸಾಗರವೋ ಎನಿಸುತ್ತದೆ. ನೂರಾರು ಪಾತ್ರಗಳು, ಅದೆಷ್ಟೋ ಘಟನೆಗಳು ಸನ್ನಿವೇಶ ಸಂದರ್ಭಗಳೆಲ್ಲ ಸೇರಿ ಮಹಾಕಾವ್ಯವಾಗಿದೆ. ಕನ್ನಡದ ಇತರ ಮಹಾಕಾವ್ಯಗಳಾದ ಶ್ರೀ ರಾಮಾಯಣ ದರ್ಶನಂ, ಶ್ರೀ ಹರಿಚರಿತ್ರೆಗಿಂತ ಇಲ್ಲಿನ ಕಾವ್ಯದ ಭಾಷೆ ಸರಳವಾಗಿ, ಅಷ್ಟೇ ಗಂಭೀರವಾಗಿದೆ. ಸ್ವತಃ ಲೇಖಕರೇ ಇದನ್ನು ಸಂಕೀರ್ಣ ಛಂದಸ್ಸು ಎಂದು ಕರೆದರೂ ಸರಳ ರಗಳೆಯಂತೆ ಪ್ರವಹಿಸುತ್ತದೆ. ಅಲ್ಲಲ್ಲಿ ಉತ್ತರ ಕರ್ನಾಟಕದ ಭಾಷೆಯ ಸೊಬಗು ಕಾವ್ಯಕ್ಕೆ ಮತ್ತಷ್ಟು ಮೆರುಗು ನೀಡಿದೆ. ಈ ಮಹಾಕಾವ್ಯ ಓದುತ್ತಾ ಹೋದಂತೆ ಹೊಸ ಪ್ರಪಂಚವೊಂದು ನಮ್ಮೆದುರು ತೆರೆದು ಕೊಳ್ಳುತ್ತದೆ. ವೇದಕಾಲೀನ ಬದುಕನ್ನು ನಮಗೆ ತೀರಾ ಹತ್ತಿರವಾಗುವಂತೆ ಇಲ್ಲಿ ಚಿತ್ರಣಗೊಂಡಿದೆ. ಇಲ್ಲಿನ ಎಲ್ಲ ಪಾತ್ರಗಳಿಗೂ ನಮ್ಮ ನಿಮ್ಮಂತೆ ಅಸೂಯೆ, ಮತ್ಸರ, ಒಬ್ಬರನ್ನು ಒಬ್ಬರು ಎತ್ತಿ ಕಟ್ಟುವುದು. ಇನ್ನೊಬ್ಬರ ಕಷ್ಟ ಕಾರ್ಪಣ್ಯಕ್ಕೆ ಸ್ಪಂದಿಸುವುದು. ಹಮ್ಮು ಬಿಮ್ಮು ಎಲ್ಲ ಎಲ್ಲವೂ ಇದೆ. ಆದರೊಂದು ಮಾತು ಮಾತ್ರ ನಿಜ. ಇಂಥ ಮಹಾಕಾವ್ಯದ ಓದುಗನಿಗೆ ಸಮೃದ್ಧ ಜ್ಞಾನದ ಪರಿಚಯವಿರಬೇಕಾಗುತ್ತದೆ. ಕಾವ್ಯದ ರಸಾಸ್ವಾದಕ್ಕೆ ಸಾಕಷ್ಟು ಪೂರ್ವ ತಯಾರಿ ಬೇಕು. ನಿಜವಾಗಿಯೂ ಆತ ಸಹೃದಯನಾಗಬೇಕು. ಇದಕ್ಕೆ ಶ್ರಮ ಸಾಧನೆ ಬೇಕು. ಆದ್ದರಿಂದಲೇ ಜಗತ್ತಿನ ಮಹಾಕಾವ್ಯಗಳು ಹೆಚ್ಚಿನ ಓದುಗರನ್ನು ತಲುಪಿಲ್ಲ. ಪ್ರಾಯಶಃ ಕುಮಾರ ವ್ಯಾಸ ಲಕ್ಷ್ಮೀಶ ಇದಕ್ಕೆ ಅಪವಾದ ಎನ್ನಬಹುದು.

●

## ನೀನು ಬರಲಿಲ್ಲ

ವಸಂತ ಎಚ್ಚರಾಗುತ್ತಿದೆ, ತೋಳು ಚಾಚುತ್ತಿದೆ.
ಬಣ್ಣಗಳ ಹಬ್ಬಕ್ಕಾಗಿ
ಹೂವುಗಳು ರೇಷಿಮೆ ನೇಯುತ್ತಿವೆ.
ನೀನು ಬರಲಿಲ್ಲ.

ಮಧ್ಯಾಹ್ನಗಳು ನೀಳವಾಗುತ್ತಿವೆ.
ದ್ರಾಕ್ಷಿಗಳನ್ನು ಕೆಂಪು ಸ್ಪರ್ಶಿಸುತ್ತದೆ.
ಕೆವಿಗೆ ಕುಯಿಲುಗತ್ತಿ ಮುತ್ತಿಡುತ್ತಿದೆ.
ನೀನು ಬರಲಿಲ್ಲ.

ಮುಗಿಲುಗಳು ಕೂಡುತ್ತಿವೆ.
ಭೂಮಿ ಚಾಚಿದೆ ಎರಡೂ ಕೈಗಳನ್ನು -
ಆಕಾಶದ ಕೊಡುಗೆಗಾಗಿ.
ನೀನು ಬರಲಿಲ್ಲ.

ಮರಗಳು ಮೋಹಕತೆಯ ಉಸಿರಾಡುತ್ತಿವೆ.
ಜೇನು ತುಂಬಿದ ತುಟಿಗಳಿಂದ
ಕಾಡ ಅಲೆಮಾರಿಗಳ ಗಾಳಿಗೊಡ್ಡುತ್ತಿವೆ.
ನೀನು ಬರಲಿಲ್ಲ.

ಋತುಗಳು ಸೌಂದರ್ಯ ಧರಿಸುತ್ತಿವೆ.
ರಾತ್ರಿ ತನ್ನ ಹುಬ್ಬುಗಳಿಗೆ
ಚಂದ್ರದಂಡೆಯ ತೊಡಿಸುತ್ತಿದೆ.
ನೀನು ಬರಲಿಲ್ಲ.

ತಾರೆಗಳು ಹೇಳುತ್ತಿವೆ:
ನನ್ನ ದೇಹದರಮನೆಯಲ್ಲಿ
ಚೆಲುವಗೆಯ ದೀಪವಿನ್ನೂ ಉರಿಯುತ್ತಿದೆ.
ನೀನು ಬರಲಿಲ್ಲ.

ಸೂರ್ಯಕಿರಣಗಳು ಆಣೆಮಾಡುತ್ತಿವೆ:
ರಾತ್ರಿಯ ಸಾವಿನ ನಿದ್ರೆಯಿಂದಲೂ
ಬೆಳಕು ಎಚ್ಚರಾಗಿಸುತ್ತದೆ.
ನೀನು ಬರಲಿಲ್ಲ.

ಪಂಜಾಬಿ : **ಅಮೃತಾ ಪ್ರೀತಮ್**
ಅನುವಾದ : **ಡಾ| ಹಾ. ಮಾ. ನಾ.**

# ಸಂಮೋಹಿನಿ ಚಿಕಿತ್ಸೆ - 7

ಡಾ| ಉಷಾರಾವ್

ಅರ್ಥವಿಲ್ಲದ ಭೀತಿಯಿಂದಾಗಿ ನರದೌರ್ಬಲ್ಯ ಉಂಟಾದ ವ್ಯಕ್ತಿಯೊಬ್ಬನ ವಿವರಗಳನ್ನು ರೇಖಾ ಚಿತ್ರದ ರೀತಿಯಲ್ಲಿ ತೋರಿಸಲಾಗಿದೆ. ಆದರೆ ಅದರ ಬಗ್ಗೆ ಒಂದು ವಿವರಣಾತ್ಮಕ ನುಡಿ ನಮ್ಮ ಓದುಗರಿಗೆ ಪ್ರಯೋಜನಕರವಾಗುವುದೆಂದು ಭಾವಿಸಲಾಗಿದೆ. ಆದುದರಿಂದ ಕೆಳಕಂಡ ವಿವರಣೆ:

ಈ ರೋಗಿ ಒಬ್ಬ ಯುವಕ. ಸೈನ್ಯದಿಂದ ಕರೆ ಬಂದುದರಿಂದ ಆತ ಬಾಪ್ರೋದ್ವೇಕಕ್ಕೆ ಒಳಗಾದ. ಏಕೆಂದರೆ ಯುದ್ಧದಲ್ಲಿ ಗಾಯ ಅಥವಾ ಮರಣ ಸಂಭವಿಸಬಹುದೆಂದು ಆತ ಬಹಳ ಭೀತನಾಗಿದ್ದ. ನಿಧಾನವಾಗಿ ಆತ ತಾನು ನಡುಕದಿಂದಲೂ ನರಳುತ್ತಿರುವುದಾಗಿ ಭಾವಿಸಲಾರಂಭಿಸಿದ್ದ. ಜತೆಗೆ ತಾನು ನಡುಗುವುದನ್ನು ಜನ ಗಮನಿಸುತ್ತಿದ್ದಾರೆಂಬ ಭೀತಿಯೂ ಅವನಲ್ಲಿ ಬೆಳೆಯಿತು. ಇದರಿಂದಾಗಿ ಆತ ಬಹಳ ವ್ಯಾಕುಲನಾದ. ``ನೀನು ಏಕೆ ನಡುಗುತ್ತಿರುವಿ?" ಎಂದು ಆತನ ಗರ್ಲ್‌ಫ್ರೆಂಡ್ ಕೂಡ ಕೇಳಿದಳು. ಇದರಿಂದ ತಾನೊಬ್ಬ ಹೇಡಿ ಎಂಬ ಹೊಸ ಭಾವನೆ ಅವನಲ್ಲಿ ಉಂಟಾಯಿತು. ಫಲಿತಾಂಶವಾಗಿ, ಆತನ ವ್ಯಾಧಿಯ ಚಿಹ್ನೆಗಳು ಇನ್ನಷ್ಟು ಗಮನಕ್ಕೆ ಬಂದು ಇತರರೊಂದಿಗೆ ಬೆರೆಯುವಲ್ಲಿ ಆತನಿಗೆ ಅರ್ಥವಿಲ್ಲದ ಭೀತಿ (ಫೋಬಿಯಾ). ಇದರಿಂದ ಹೊರ ಬರುವ ದಾರಿ ಕಾಣಲು ಆತ ಸಂಪೂರ್ಣ ಅಸಮರ್ಥನಾಗಿ ತೀವ್ರ ಹೃದಯಬಡಿತ, ಬಾಯಿ ಒಣಗುವುದು, ಎದೆ ನೋವು, ಉಸಿರಾಟದ ತೊಂದರೆ, ಬೆವರುವಿಕೆ ಮುಂತಾದ ತೊಂದರೆಗಳು ಕಾಣಿಸಿಕೊಂಡವು. ಅಂತಿಮವಾಗಿ ಆತ ಸ್ವಯಂ ಹತೋಟಿ ಸಾಧ್ಯವೇ ಇಲ್ಲದಂಥ ರೋಗಿಯಾಗಿ ಮಾರ್ಪಟ್ಟನು.

ಈಗ ಸಂಮೋಹಿನಿ ಸೂಚನೆಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ವಿವರಣೆ ಮೂಲಕ ನೋಡೋಣ

ಹೊರಟು ಬರಬೇಕೆಂದು ಸೈನ್ಯದಿಂದ ಕರೆಬಂದ ವ್ಯಕ್ತಿಯಲ್ಲಿ, ನರದೌರ್ಬಲ್ಯ ಹೇಗೆ ಉಂಟಾಯಿತು ಎಂಬುದನ್ನು ನೋಡೋಣ:-

1. ಸೈನ್ಯದಿಂದ ಕರೆ ಬಂದುದರಿಂದ ಅದೊಂದು ಭಾವಾವೇಶದ ಘಟನೆಯಾಯಿತು - ಸ್ವಯಂ ಮೋಹಿನಿಗೆ ಸ್ಪಂದಿಸುವಂತೆ ಮೆದುಳನ್ನು ಸೂಕ್ಷ್ಮಗೊಳಿಸಲಾಯಿತು ಮತ್ತು ವಿಚಾರ ಪ್ರಜ್ಞೆಯನ್ನು ಪ್ರಚೋದಿಸಲಾಯಿತು.
2. ಮಿದುಳಿನಲ್ಲಿ ಅಧಿಕಾರಯುಕ್ತ ವಿಚಾರವನ್ನು ನಾಟಲಾಯಿತು. ಭಾವಾವೇಶದಿಂದ ಸ್ವಯಂ-ಮೋಹಿನಿ ಸ್ಥಿತಿಗೆ ಸೂಕ್ಷ್ಮೀಕರಿಸಲಾಯಿತು - ಗಾಯ/ಮರಣದ ಭಯ.
3. ಸ್ವತಂತ್ರ ನರವ್ಯವಸ್ಥೆಯ ಮೇಲೆ ಭಯದ ಕ್ರಿಯೆಯ ಫಲಿತಾಂಶವಾಗಿ ಚಿಹ್ನೆಗಳು ಗೋಚರಿಸುತ್ತವೆ-ನಡುಗುವಿಕೆ.
4. ನಡುಗುವಿಕೆ ಬಗ್ಗೆ ಚಿಂತೆ, ನಡುಗುವಿಕೆಯನ್ನು ಜನ ಗಮನಿಸುವರು ಮತ್ತು ಆತನನ್ನು ಹೇಡಿ ಎಂದು ಭಾವಿಸುರವೆಂಬ ಭೀತಿ.
5. ಅಧಿಕ ಒತ್ತಡ ಮತ್ತು ಗರ್ಲ್‌ಫ್ರೆಂಡ್ ``ಏಕೆ ನಡುಗುತ್ತಿರುವಿ?" ಎಂದು ಕೇಳಿದಾಗ ಚಿಂತೆ.
6. ಆತ ಭಯಗೊಂಡಿದ್ದಾನೆ ಎಂಬುದನ್ನು ಎಲ್ಲರೂ ನೋಡಬಲ್ಲರು ಎಂಬ ವಿಚಾರವನ್ನು ಮನಸ್ಸಿನಲ್ಲಿ ನಾಟಲಾಯಿತು. ತಲೆಯಲ್ಲಿ 'ಒತ್ತಡ' - ತಲೆನೋವು - ತಲೆ `ಬಿಗಿ'ಯುವ ಭಾವನೆ ನಡುಗುವಿಕೆ, ಬೆವರುವಿಕೆ, ತೀವ್ರ ಹೃದಯ ಬಡಿತ, ಏದುಸಿರು, `ಮುಳುಗುತ್ತಿರುವ' ಭಾವನೆ, ಮೂತ್ರದ ತೊಂದರೆಗಳು, ಕರುಳಿನ ತೊಂದರೆಗಳುಸ ನಿರುತ್ಸಾಹ, ಲೈಂಗಿಕ ತೊಂದರೆಗಳು - ಇತ್ಯಾದಿ.
7. ಈ ಎಲ್ಲ ಚಿಹ್ನೆಗಳ ಕಿರಿಕಿರಿ ಮತ್ತ ಹೊಸ ಚಿಹ್ನೆಗಳ ಬೆಳವಣಿಗೆ - ಜನ ತನ್ನನ್ನು ಹೇಡಿ ಎಂದು ಭಾವಿಸುವವರು ಎಂದು ಆತ ಭಾವಿಸುವುದರಿಂದ ಇತರರೊಂದಿಗೆ ಬೆರೆಯಲು ಹೆದರಿಕೆ.
8. ನರಗಳ ಉದ್ರಿಕ್ತತೆ ಮತ್ತು ಹೊಸ ಚಿಹ್ನೆಗಳು ಕಾಣಿಸಿಕೊಳ್ಳುವುದು. ಅಧಿಕಗೊಂಡ ಚಿಂತೆ, ಯಾರನ್ನೂ ಎದುರಿಸಲು ಅಸಾಮರ್ಥ್ಯ - ಗಾಬರಿ - ಕೆಲಸ ಮಾಡಲು ಸಾಧ್ಯವಿಲ್ಲದಿರುವುದು.

'ಹುಚ್ಚುತನ'ದ ಭೀತಿ, ಯೋಚಿಸಲು ಅಸಮರ್ಥತೆ, ಹತೋಟಿಯಿಲ್ಲದಿರುವುದು. "ಕಣ್ಣುಕತ್ತಲೆ ಮತ್ತು ಮೂರ್ಛೆ".

ಇತರ ನಮೂನೆಯ ನರದೌರ್ಬಲ್ಯದ ಚಿಹ್ನೆಗಳು ತಲೆಯಲ್ಲಿ 'ಒತ್ತಡ' - ತಲೆನೋವು - ತಲೆ 'ಬಿಗಿ'ಯುವ ಭಾವನೆ ನಡುಗುವಿಕೆ, ಬೆವರುವಿಕೆ, ತೀವ್ರ ಹೃದಯ ಬಡಿತ, ಏದುಸಿರು, 'ಮುಳುಗುತ್ತಿರುವ' ಭಾವನೆ, ಮೂತ್ರದ ತೊಂದರೆಗಳು ನಿರುತ್ಸಾಹ, ಲೈಂಗಿಕ ತೊಂದರೆಗಳು - ಇತ್ಯಾದಿ.

ಈ ಯುವಕನ ನರದೌರ್ಬಲ್ಯಗಳನ್ನು ಗುಣಪಡಿಸಲಾಯಿತು.

1. ಮನಸ್ಸಿನಲ್ಲಿ ಗುಣವಾಗುವುದೆಂಬ ಅಧಿಕಾರಯುಕ್ತ ವಿಚಾರದ ನಾಟಿ- ಸಂಮೋಹಿನಿಯಿಂದ ಸೂಚನೆಗಳಿಗೆ ಪ್ರತಿಕ್ರಿಯೆ. ಗುಣವಾಗಬೇಕೆಂಬ ಅಪೇಕ್ಷೆಯನ್ನು ಬಳಸಿಕೊಂಡು ರೋಗಿಯನ್ನು ಭಾವನಾತ್ಮಕವಾಗಿ ಜಾಗೃತಗೊಳಿಸುವುದು. ಮಿದುಳನ್ನು ಸೂಕ್ಷ್ಮಗೊಳಿಸಲಾಯಿತು. ಸಂಮೋಹಿನಿ ಮೂಲಕ ವಿಷ ವರ್ತುಲವನ್ನು ಛಿದ್ರಗೊಳಿಸ ಲಾಯಿತು.
2. ರೋಗ ಚಿಹ್ನೆಗಳಲ್ಲಿ ಸುಧಾರಣೆ, ಸ್ವತಃಶ್ಚಲಿನರ ವ್ಯವಸ್ಥೆ ಮೂಲಕ ರಿಲ್ಯಾಕ್ಸ್ ಮಾಡಲು ಮತ್ತಿತರ ಸೂಚನೆಗಳಿಗೆ ಪ್ರತಿಕ್ರಿಯೆ.
3. ರೋಗಿ ತಾನು ಸುಧಾರಿಸಿರುವುದಾಗಿ ಭಾವಿಸುತ್ತಾನೆ. ಸಂಪೂರ್ಣ ಗುಣವಾಗುವುದೆಂಬ ವಿಶ್ವಾಸ ಬೆಳೆಯುತ್ತದೆ.
4. ಚಿಂತೆ ಕಡಿಮೆಯಾಗಿ ನರಗಳ ಉದ್ವೇಗ ಕಡಿಮೆಯಾಗುತ್ತದೆ.
5. ಮತ್ತಷ್ಟು ಸುಧಾರಣೆ ಮತ್ತು ಅನಾರೋಗ್ಯಕರ ಚಿಹ್ನೆಗಳು ಕಡಿಮೆಯಾಗುತ್ತವೆ.
6. ಹೆಚ್ಚಿದ ವಿಶ್ವಾಸ. ``ನಾನು ಮಾಡಬಲ್ಲೆ" ಎಂಬ ಭಾವನೆಯ ಬೆಳವಣಿಗೆ, ರಚನಾತ್ಮಕ ಸೂಚನೆಗಳನ್ನು ಮನಸ್ಸಿನಲ್ಲಿ ನಾಟಲಾಯಿತು.
7. ಸಂಪೂರ್ಣ ಗುಣ.

ವಿವರಣೆಯ ಬಗ್ಗೆ ಈಗ ಮತ್ತೊಮ್ಮೆ ವಿವರಣಾತ್ಮಕ ಟಿಪ್ಪಣಿ:

ಈಗ ರೋಗಿಯನ್ನು ಗುಣವಾಗಬೇಕೆಂಬ ಅವನ ಅಪೇಕ್ಷೆಯನ್ನು ಬಳಸಿಕೊಂಡು ಭಾವನಾತ್ಮಕವಾಗಿ ಜಾಗೃತಗೊಳಿಸಲಾಗಿದೆ. ಮಿದುಳನ್ನು ಸೂಕ್ಷ್ಮ ಸಂವೇದನೆಗೊಳಿಸಲಾಗಿದೆ, ಸಂಮೋಹಿನಿಯನ್ನು ಪ್ರೇರಿಸಲಾಗಿದೆ. ಸಂಪೂರ್ಣ ಗುಣವಾಗುವುದೆಂಬ ಪ್ರಬಲ ವಿಚಾರವನ್ನು ರೋಗಿಯ ಮನಸ್ಸಿನಲ್ಲಿ ನಾಟಲಾಗಿದೆ. ಫಲಿತಾಂಶವಾಗಿ ಚಿಹ್ನೆಗಳಲ್ಲಿ ಗಮನಾರ್ಹ ಸುಧಾರಣೆ. ರೋಗಿ ವಿಶ್ವಾಸವನ್ನು ಬೆಳೆಸಿಕೊಂಡಿದ್ದು ಆದರಿಂದ ಚಿಂತೆ ದೂರವಾಗಿ ನರಗಳ ಉದ್ರಿಕ್ತೆ ಕಡಿಮೆಯಾಗಿದೆ. ಈ ಹೆಚ್ಚಿದ ವಿಶ್ವಾಸವು ರಚನಾತ್ಮಕ ಸೂಚನೆಗಳನ್ನು ರೋಗಿಗೆ ನೀಡಿ ``ನಾನು ಮಾಡಬಲ್ಲೆ" ಎಂಬ ಭಾವನೆಯನ್ನು ಬೆಳೆಸಿದೆ. ಈ ರಚನಾತ್ಮಕ ಸೂಚನೆಗಳನ್ನು ಕಾರ್ಯರೂಪಕ್ಕೆ ತರುವ ಸಾಮರ್ಥ್ಯ ಸಂಪೂರ್ಣ ಗುಣಕ್ಕೆ ಹಾದಿ ಮಾಡಿದೆ.

# ಅಲ್ಪನಿಗೆ ಐಶ್ವರ್ಯ ಬಂದರೇ !

• ರಮಾ ಕೃಷ್ಣಸ್ವಾಮಿ

ಸಿದ್ಧ ಶ್ಯಾನುಭೋಗ ರಾಮಣ್ಣನವರ ಮನೆ ಸೇರಿ ಮನೆಯ ಮಗನಂತೆಯೇ ಬೆಳೆಯುತ್ತಿದ್ದ. ತಬ್ಬಲಿಯನ್ನು ಮಮತೆಯಿಂದ ಕಾಣುತ್ತಿದ್ದರು. ರಾಮಣ್ಣನವರ ಹೆಂಡತಿ ಲಕ್ಷ್ಮಣ್ಣ, ಶ್ಯಾನುಭೋಗರ ಮಕ್ಕಳುಟ್ಟು ಬಿಟ್ಟಿದ್ದ ಬಟ್ಟೆ ತೊಟ್ಟು ಅವರೊಳ್ಬನಾಗಿ ಈಗಾಗಲೇ ಮುಖದ ಮೇಲೆ ಚಿಗುರು ಮೀಸೆ ಮೂಡಿತ್ತು. ಎಲ್ಲರಿಗೂ ಸಿದ್ಧ ಪ್ರಿಯನಾಗಿದ್ದ ಯಾರು ಏನೇ ಹೇಳಿದರೂ ಬೇಸರವಿಲ್ಲದೆ ಮಾಡುತ್ತಿದ್ದ. ಶ್ಯಾನುಭೋಗರ ಸಂಸಾರ ಅವನ ತಂದೆ, ತಾಯಿ, ಬಂಧು ಬಳಗ ಎಲ್ಲವೂ ಆಗಿತ್ತು.

ಶ್ಯಾನುಭೋಗರು ಒಂದು ದಿನ ಸಿದ್ಧನಿಗೆ ಹೇಳಿದರು. `ಸಿದ್ಧ ಹೊಟ್ರದ ತಿಪ್ಪೆ ದೊಡ್ಡದು ಮಾಡಿ ನೀರು ತುಂಬದಂತೆ ಕಟ್ಟೆ ಹಾಕಬೇಕು. ಮಳೆ ಬಂದರೆ ಹೊಟ್ರದ ಗುಂಡಿ ನೀರು ತುಂಬುತ್ತದೆ. ಇವತ್ತೇ ಆ ಕೆಲಸ ಮಾಡಿಬಿಡು" ಅಂದರು. ಸಿದ್ಧ ಹೊಂಗುಟ್ಟೆ ಗುದ್ದಲಿ, ಹಾರೆ ತೆಗೆದುಕೊಂಡು ಹೊರಟ. ಸುಮಾರು ಹೊತ್ತು ಆಗಿದ ನಂತರ ಅವನ ಹಾರೆಗೆ ಏನೋ ತಾಗಿತು. ಕುತೂಹಲದಿಂದ ತೆಗೆದು ನೋಡಿದ. ಅವನಿಗೆ ಒಮ್ಮೆಲೆ ಸಂತೋಷವಾಯ್ತು. ಹಾಗೂ ಯಾರಾದರೂ ನೋಡುತ್ತಿರುವರೋ ಎಂದು ಸುತ್ತಾ ಕಣ್ಣಾಡಿಸಿದ. ಯಾರೂ ಹತ್ತಿರದಲ್ಲಿದ್ದುನೋಡಿ ಕೊಂಡು ಮುಚ್ಚಲ ತೆಗೆದ ಅವನ ಕಣ್ಣನ್ನು ನಂಬದಾದ, ಅದರ ಭರ್ತಿ ಬೆಳ್ಳಿರೂಪಾಯಿಗಳು. ಅದನ್ನು ಎಲ್ಲಿ ಸುರಕ್ಷಿತವಾಗಿಡುವುದೆಂದು ತಿಳಿಯದೆ ಸಿದ್ಧ ಒದ್ದಾಡಿದ ಸದ್ಯಕ್ಕೆ ಅಲ್ಲೇ ಆಳವಾಗಿ ಗುಂಡಿ ತೆಗೆದು ಹೂತು ಬಂದ. ಊರಿನ ಎಲ್ಲ ದೈವಗಳಿಗೂ ಮನಸ್ಸಿನಲ್ಲೇ ನಮಸ್ಕರಿಸಿದ. ಇನ್ನು ಶ್ಯಾನುಭೋಗರ ಮನೆಯ ಜೀತದಾಳು. ತಾನಲ್ಲ ತನ್ನದಾದ ಹೊಲ, ಮನೆ ಎಲ್ಲದರ ಕನಸು ಕಾಣತೊಡಗಿದ. ಕನಸಿನ ಮಹಲು ಕಟ್ಟುವುದಲ್ಲಿ ತಲ್ಲೀನನಾಗಿರುತ್ತಿದ್ದ. ಸಿದ್ಧ, ಬಾಕಿ ಎಲ್ಲ ಕೆಲಸಗಳಲ್ಲೂ ಅನಾದರ ಯಾರು ಏನು ಹೇಳಿದರೂ ಅದರಲ್ಲಿ ಗಮನ ಇಲ್ಲವಾಯ್ತು. ಹಗಲು ರಾತ್ರಿ ಮನಸ್ಸಿನಲ್ಲಿ ಮಂಡಿಗೆ ಮೆಲ್ಲ ತೊಡಗಿದ. ತನಗೆ ತಾನೇ ಈಗ ಸಾವಕಾರ್‍ನ ಸಿದ್ದೇ ಗೌಡ್ರಾಗಿದ್ದ. ಶ್ಯಾನುಭೋಗರ ಮನೆಗೆ ಬರುತ್ತಿದ್ದ ದೊಡ್ಡೇ ಗೌಡ್ರ ಥರ ಒಳ್ಳೆ ಗರಿ ಮುರಿ ಬಿಳಿ ಪಂಚೆ, ಸೊಗಸಾದ ಬಿಳಿ ಶರ್ಟು, ಕೋಟು, ಒಳ್ಳೆ ಚಪ್ಪಲಿ ಮೆಟ್ಟಿ ತಿರುಗುತ್ತಾ ಜನಗಳಿಂದ ಸಿದ್ದೇಗೌಡ್ರೇ ಅನ್ನಿಸಿಕೊಳ್ಳುವ ಕಾಲ ದೂರವಿಲ್ಲ ಎಂದು ಕನಸು ಕಂಡ. ಪ್ರತಿದಿನ ಸಗಣಿ ಹಾಕಲು ತಿಪ್ಪೆಗೆ ಹೋದಾಗ ಸುತ್ತಾ ಮುತ್ತಾ ಯಾರೂ ಇಲ್ಲದ್ದು ನೋಡಿ ತಪ್ಪದ್ದೇ ಬಿಂದಿಗೆ ತೆಗೆದು ನೋಡಿ ಹೆಮ್ಮೆಯಿಂದ ಬೀಗುತ್ತಿದ್ದ.

ಸಿದ್ಧನ ನಡೆ, ನುಡಿ ಎಲ್ಲಾ ಬದಲಾಗುತ್ತಾ ಬಂತು. ಯಾರಾದೂ ಸೂಗುತ್ತಿದ್ದಂತೆಯೇ ವಿನಯದಿಂದ ಹಾಜರಾಗುತ್ತಿದ್ದ ಸಿದ್ಧ, ಈಗ ಹೋದರಾಯಿತು ಎನ್ನುವ ಧೋರಣೆ ರೂಢಿಸಿಕೊಂಡ.

ಒಮ್ಮೆ ಕೂಗಿ ಬೇಸತ್ತ ಲಕ್ಷ್ಮಣ ಸಿದ್ಧನನ್ನು ಜಬರಿಸಿದರು. `ಸಿದ್ಧ ಈಚೆಗೆ ಏನಾಗಿದೆ? ತಿಪ್ಪೆಗೆ ಹೋದರೆ ಎರಡು ಘಂಟೆ ಮಾಡುತ್ತೀ' ಅಂ ನಿನ್ನ ನಿನಗೇನಾಗಿದೆ? ತಿಪ್ಪೆಗೆ ಹೋದರೆ ಎರಡು ಘಂಟೆ ಮಾಡುತ್ತೀ' ಎಂದು ಅವರ ಕೂಗಾಟದ ಪರಿಣಾಮ ಏನೂ ಆಗಾಲಿಲ್ಲ. ಸಿದ್ಧನ ಮೇಲೆ, ಬದಲಿಗೆ ಅವನಿಂದ ಧಿ ಮಾತಿನ ಉತ್ತರ ಬಂತು. ಅದ್ಯಾಕ್ಹಂಗೆ ಕೂಕ್ಕೊಂತ್ರೀರಿ? ನನಗೇನು ಕಿವುಡಾ? ಸಿದ್ದಾ, ಸಿದ್ದಾಂತ. ಸಿದ್ಧಯ್ಯಾನ್ನಲ್ಕಾಗಾಕಿಲ್ವ? ಎಂದ. ಲಕ್ಷ್ಮಮ್ಮ ಅವಕ್ಕಾದರು ಸಂಬಳ ಬರೆಸಿಕೊಳ್ಳಲು ಬಾರದ ಸಿದ್ಧ ಈಗ ಚಿಗುರು ಮೀಸೆ ಸಿದ್ಧನಾಗಿದ್ದಾನೆ. ನಮ್ಮದೇ ತಪ್ಪು ಬೆಳೆದ ಹುಡುಗ ಎಂದು ಯೋಚಿಸಿ ಸಿದ್ಧಯ್ಯಾ ಎಂದೇ ಕೂಗಲು ಪ್ರಾರಂಭಿಸಿದರು. ಸಿದ್ಧ ನಾಕುದಿನ ಸಿದ್ಧಯ್ಯಾಂತ ಕರಿಸಿಕೊಂಡ ನಂತರ ಎಲ್ಲರನ್ನೂ ಸಿದ್ದಣ್ಣಾಂತ ಕರೆರಿ. ಎಂದು ಆಗ್ರಹಪಡಿಸಿದ. ಕೆಲವರಿಗೆ ಇದು ಮೋಜೆನಿಸಿತು. ಮತ್ತೆ ಕೆಲವರು ಇವನನ್ನು ಗೇಲಿ ಮಾಡಿದರು. ಕೆಲವರು ಇವನಲ್ಲಾದ ಬದಲಾವಣೆಗೆ ಕಾರಣ ಹುಡುಕ ತೊಡಗಿದರು. ಸಿದ್ಧ, ಸಿದ್ಧಯ್ಯ, ಸಿದ್ಧಣ್ಣ, ಸಿದ್ದೇ ಗೌಡ, ಸಿದ್ದೇ ಗೌಡ್ರೇ ಎಂದೂ ಕರೆಸಿಕೊಂಡೇ ಬಿಟ್ಟ. ಆಗ್ರಹ ಮಾಡಿ, ಶಾನುಭೋಗರು ಸಿದ್ದೇ ಗೌಡ್ರೇ ಎಂದೇನೋ ಕರೆಯಲು ಪ್ರಾರಂಭಿಸಿದರು. ಹಾಗೂ ಅವನ ಮೇಲೆ ನಿಗಾ ಇಟ್ಟರು. ಲಕ್ಷ್ಮಮ್ಮ ನವರೂ ಸಿದ್ಧನ ಬಗ್ಗೆ ಯಜಮಾನರಲ್ಲಿ ದೂರಿದಾಗ `ನೋಡೋಣ ತಡಿ ಅವನನ್ನು ಬಯ್ಯು ಹಿಯ್ಯಾ ಮಾಡಬೇಡ ಹುಡುಗ ಮುಂಡೇದು" ಎಂದು ಎರನ್ನು ತಾಕೀತು ಮಾಡಿದರು.

(ಪುಟ 16ಕ್ಕೆ)

## ಸಾದರ ಸ್ವೀಕಾರ

ಪುಸ್ತಕದ ಹೆಸರು : MUSINGS
ಲೇಖಕರು : ಶ್ರೀ ಅರಕಲಗೂಡು ಎಸ್. ನಾಗರಾಜ್
ಪ್ರಕಾಶಕರು : ಶ್ರೀಮತಿ ಎನ್. ಸರಸ್ವತಿ
ಬೆಲೆ : 72 ರೂಪಾಯಿಗಳು

`ಪರಮಹಂಸ ಪ್ರಿಯ' ಕಾವ್ಯನಾಮದಿಂದ ಖ್ಯಾತರಾದ ಶ್ರೀ ಅರಕಲಗೂಡು ಎಸ್. ನಾಗರಾಜ್ Englishನಲ್ಲಿ ಬರೆದಿರುವ ಚುಟುಕುಗಳು `Musings'ನಲ್ಲಿದೆ. ಉದ್ಯಮ ಕ್ಷೇತ್ರದಲ್ಲಿ ಕಂಡು ಬರುವ ಶಿಸ್ತಿನ ಪಾಲನೆಯಲ್ಲಿನ ಕೊರತೆ ಹಾಗೂ ಅವುಗಳನ್ನು ಸರಿಪಡಿಸಿಕೊಳ್ಳುವ ಬಗೆಗಳನ್ನೂ ಸರಳ ವೃತ್ತಾಂತಗಳ ಮೂಲಕ ಇಲ್ಲಿ ಅಭಿವ್ಯಕ್ತಿಸಿದ್ದಾರೆ. ವಿನೋದ ಪ್ರತಿಕ್ರಿಯೆಯಿಂದಲೇ ಸಮಾಜಕ್ಕೆ ಅವಶ್ಯಕವಾದ ಸೇವಾ ಮನೋಭಾವ ರೂಪಿಸಿಕೊಳ್ಳುವ ಬಗೆಯನ್ನು ನಿರೂಪಿಸಿರುವುದು ಈ ಪುಸ್ತಕದ ವೈಶಿಷ್ಟ್ಯ. ಶ್ರೀ N. K. Pai [Forum of Free Enterprise] ಹೇಳುವಂತೆ ``Musings is really a book on Management in the Indian context."

***

ಪುಸ್ತಕದ ಹೆಸರು : ಬಹಿರಂತರ
ಲೇಖಕರು : ಯಸ್. ಬಿ. ಕುಂದರ್ (ಸ. ಬಿ. ಕು.)
ಪ್ರಕಾಶಕರು : ಸ. ಬಿ. ಕು.
ಬೆಲೆ : 25 ರೂಪಾಯಿಗಳು

`ಬಹಿರಂತರ' ಗದ್ಯ ಸಾಹಿತ್ಯದ ಒಂದು ಪ್ರಕಾರವಾದ `ಪ್ರಬಂಧ'ಗಳ ಸಂಕಲನ. ಪ್ರಬಂಧದ ವರ್ಣನೆಯೊಂದಿಗೆ ಕಥೆಯ ಲಾಲಿತ್ಯವನ್ನು ಹೊಂದಿರುವ ಇಲ್ಲಿನ ಪ್ರಬಂಧಗಳು ಸುಲಭವಾಗಿ ಓದಿಸಿಕೊಂಡು ಹೋಗುತ್ತದೆ. ಒಟ್ಟು ಹದಿನೇಳು ಪ್ರಬಂಧಗಳನ್ನೊಳಗೊಂಡ `ಬಹಿರಂತರ' ದೈನಂದಿನ ಜಂಜಡ ಮರೆಸಿ ಉತ್ಸಾಹ ಮೂಡಿಸುತ್ತದೆ. ಅಂತರಂಗ ಬಹಿರಂಗಗಳಲ್ಲಿನ ಅಂತರವನ್ನು ಎತ್ತಿ ಹಿಡಿದು ಆತ್ಮಾವಲೋಕನಕ್ಕೆ ಕೈ ಹಚ್ಚುವಂತೆ ಮಾಡುವ ಇಲ್ಲಿನ ವಿಡಂಬನೆಗಳು ನಮ್ಮ ಸಂವೇದನೆಗಳನ್ನು ಜಾಗೃತಗೊಳಿಸುತ್ತದೆ. ನಗರದ ಬದುಕಿನ ಸಂಕೀರ್ಣತೆಗೆ ಕನ್ನಡಿ ಹಿಡಿಯುವಂತಿರುವ ಇಲ್ಲಿನ ಬಹಳಷ್ಟು ಪ್ರಬಂಧಗಳ ವಸ್ತು ಬದುಕಿಗೆ ಹತ್ತಿರವೆನಿಸುವುದರಿಂದ ಆತ್ಮೀಯವಾಗಿವೆ.

Regn. No. 040015/86
Regn. No. MH/By/NE121/95

## ಅಲ್ಪನಿಗೆ ಐಶ್ವರ್ಯ ಬಂದರೇ !

(ಪುಟ 15ರಿಂದ)

ಒಂದು ದಿನ ಅವನು ಸಗಣಿ ತಟ್ಟಿ ಹೊತ್ತುಕೊಂಡು ಹೋಗುತ್ತಿದ್ದಾಗ ಅವನನ್ನು ಹಿಂಬಾಲಿಸಿದರು. ಅವನಿಗೆ ತಿಳಿಯದಂತೆ ಅವಿತು ನಿಂತು ಅವನನ್ನ ಗಮನಿಸುತ್ತಿದ್ದರು. ಸಿದ್ದ ಸುಮಾರು ಹೊತ್ತು ತಿಪ್ಪೇಗುಂಡಿಯ ಬಳಿಯೇ ಇದ್ದ. ಸುತ್ತಾ ಮುತ್ತ ಜನ ಯಾರೂ ಇಲ್ಲದ್ದು ನೋಡಿಕೊಂಡು ಗುಂಡಿ ಒಳಗಿಳಿದ. ಅದೇನು ಮಾಡುತ್ತಿದ್ದನೆಂದು ಶ್ಯಾನು ಭೋಗರಿಗೆ ಕಾಣಲಿಲ್ಲ. ಸುಮಾರು ಹೊತ್ತು ಗುಂಡಿಯಲ್ಲೇ ಇದ್ದು ನಂತರ ಮನೆಗೆ ಹೋದ. ಶಾನುಭೋಗರು ಅವನು ಹೋದ ಮೇಲೆ ಗೊಬ್ಬರದ ಗುಂಡಿ ಹತ್ತಿರಹೋಗಿ ಸೂಕ್ಷ್ಮವಾಗಿ ಕಣ್ಣಾಡಿಸಿದರು. ಅವರಿಗೊಂದು ಕಡೆ ಅಗೆದ ಹೊಸ ಮಣ್ಣು ಕಣ್ಣಿಗೆ ಬಿತ್ತು. ಅಲ್ಲಿ ಹತ್ತಿರ ಬಿದ್ದಿದ್ದ ಕೋಲಿನಿಂದ ಅಗೆದರು. ಮಣ್ಣು ಹಗುರವಾಗಿ ಬಂತು. ಅಗೆದು ನೋಡಿದಾಗ, ಅವರಿಗೆ ಬೆಳ್ಳಿ ರೂಪಾಯಿ ತುಂಬಿದ ಬಿಂದಿಗೆ ಕಂಡಿತು. ಅದನ್ನು ಹಾಗೆ ಮುಚ್ಚಿ ಬಂದು ರಾತ್ರಿ ಯಾರಿಗೂ ತಿಳಿಯದಂತೆ ಮನೆಗೆ ತಂದು ಕಬ್ಬಿಣದ ಪೆಟ್ಟಿಗೆಗೆ ಸೇರಿಸಿದರು.

ಯಥಾ ಪ್ರಕಾರ ಮಾರನೇ ದಿನ ಸಿದ್ದ ಸಗಣಿ ಹಾಕಲು ಹೋದ ಅವನಿಟ್ಟಿದ್ದ ಜಾಗದಲ್ಲಿ ಬಿಂದಿಗೆ ಇರಲಿಲ್ಲ. ಎಲ್ಲಾ ಕಡೆಯೂ ಹುಡುಕಿದ ಸಿಕ್ಕಲಿಲ್ಲ. ಸಿದ್ದನಿಗೆ ದಿಕ್ಕೇ ತೋರದಂತಾಯ್ತು. ಕುಳಿತು ಮನಸ್ಸಿಗೆ ಸಮಾಧಾನವಾಗುವವರೆಗೆ ಅತ್ತ. ಅಂತೂ ತನ್ನ ಹಣಬರ ಇಷ್ಟೇ ಶ್ಯಾನುಭೋಗರ ಮನೆ ಆಳು ಎಂದು ನಿಟ್ಟುಸಿರುಬಿಟ್ಟ ಮನೆಗೆ ಬಂದ ಸಪ್ಪಗೆ . ಲಕ್ಷ್ಮಮ್ಮ ಅವನನ್ನು ಕಾಣುತ್ತಿದ್ದಂತೆಯೇ ಕೂಗಿದರು. `ಸಿದ್ದೇ ಗೌಡ್ರೇ ರೊಟ್ಟಿ ತಿನ್ನಾಕ್ಕೆ ಬರ್‍ತೀರಾ? ತೋಟಕ್ಕೆ ಹೋಗಬೇಕಾಲ್ಲಾ, ಬೇಸಾಯದ ಆಳುಗಳಿಗೆ ಬುತ್ತಿತೊಗೊಂಡು ಎಂದ್ರು, ಯಾಕವ್ವಾ ಸಿದ್ದೇಗೌಡ್ರೆಂತೀರ ಸಿದ್ದಾನ್ನಿ ಸಾಕು ಎಂದ ಸಿದ್ದ ಹತ್ತಿರದಲ್ಲೇ ಇದ್ದ ಶ್ಯಾನುಭೋಗರು ಒಳಗೇ ನಕ್ಕರು. ಸಿದ್ದನನ್ನು ತಬ್ಬಲಿ ಎಂದು ಮಮತೆಯಿಂದ ಸಾಕಿದ್ದರು. ಅವನನ್ನು ಹತ್ತಿರ ಕರೆದು ಹೇಳಿದರು. `ಸಿದ್ದಾ ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರೀಲಿ ಕೊಡೆ ಹಿಡಿಸಿ ಕೊಂಡಾಂತ ಅನ್ನೋ ಹಾಗೆ ಮಾಡಿದಿಯಲ್ಲೋ ನಿನ್ನ ಹಣ ನಾನು ಸುರಕ್ಷಿತವಾಗಿ ತಂದು ಇಟ್ಟಿದ್ದೀನಿ. ನನ್ನ ಬಳಿ ಇರಲಿ ನಿನಗೆ ಆಸ್ತಿ ಪಾಸ್ತಿ ಮಾಡಿ ಮದುವೇನೂ ಮಾಡ್ತೀನಿ ಯೋಚನೆ ಮಾಡಬೇಡ ಎಂದು ಆಶ್ವಾಸನೆ ಕೊಟ್ಟರು. ಅದರಂತೆಯೇ ಮಾಡಿದರು. ಸಿದ್ದ ಸಿದ್ದನಾಗೇ ಉಳಿದ. ●

# ಸುತ್ತ ಮುತ್ತ....

## ಮುಂಬಯಿ ವಿ. ವಿ. ಕನ್ನಡ ಎಂ.ಎ. ಪ್ರವೇಶ ಸೂಚನೆ

ಮುಂಬಯಿ ವಿಶ್ವ ವಿದ್ಯಾಲಯ ಕನ್ನಡ ವಿಭಾಗದಲ್ಲಿ ಈ ಬಾರಿಯ ಪ್ರಥಮ ಎಂ.ಎ. ತರಗತಿಗಳಿಗೆ ಸೇರ ಬಯಸುವವರು ಜುಲೈ ಕೊನೆಯೊಳಗಾಗಿ ಅರ್ಜಿ ಸಲ್ಲಿಸಬಹುದು. ಆಗಸ್ಟ ಮೊದಲ ವಾರದಿಂದ ತರಗತಿಗಳು ಪ್ರಾರಂಭವಾಗುತ್ತವೆ. ಆಸಕ್ತರು, ಮುಖ್ಯಸ್ಥರು, ಕನ್ನಡ ವಿಭಾಗ, ಮುಂಬಯಿ ವಿಶ್ವ ವಿದ್ಯಾಲಯ, ವಿದ್ಯಾನಗರಿ, ಸಾಂತಾಕ್ರೂಜ್ (ಪೂರ್ವ), ಮುಂಬಯಿ-400098. (The Head, Dept. of Kannada, University of Bombay, Vidyanagari, Santacruz (E), Mumbai-400 098) ಈ ವಿಳಾಸಕ್ಕೆ 25 ರೂ.ಗಳನ್ನು ಎಂ.ಓ. ಮೂಲಕ ಕಳುಹಿಸಿ ಅರ್ಜಿಯನ್ನು ಪಡೆಯಬಹುದು ಎಂದು ವಿಭಾಗದ ಪ್ರಕಟಣೆ ತಿಳಿಸಿದೆ.

## ಕರ್ನಾಟಕ ಸಂಘದ ಹೊಸ ಆಡಳಿತ ವರ್ಗ

ಜೂನ್ 30ರಂದು ಕರ್ನಾಟಕ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆ ಹಾಗೂ ಚುನಾವಣೆ ನಡೆಯಿತು. `ಈ ಸಂಜೆ ಸುದ್ದಿ'ಯ ಸಂಪಾದಕರಾದ ಶ್ರೀ ಜಯರಾಮ ಕೆ. ಅಳ್ವ, ಸಂಘದ ನೂತನ ಅಧ್ಯಕ್ಷರಾಗಿಯೂ, ಡಾ। ವಿಶ್ವನಾಥ ಕಾರ್ನಾಡರು ಸಭಾಧ್ಯಕ್ಷರಾಗಿಯೂ, ಶ್ರೀ ವಿವೇಕ ಶಾನುಭಾಗರು ಉಪ-ಸಭಾಧ್ಯಕ್ಷರಾಗಿಯೂ ಆಯ್ಕೆಯಾಗಿದ್ದಾರೆ. ಕಾರ್ಯಕಾರಿ ಸಮಿತಿಗೂ ಹೊಸದಾಗಿ ಎಂಟು ಸದಸ್ಯರು ಆಯ್ಕೆಯಾಗಿದ್ದಾರೆ. ಈಯೆಲ್ಲರಿಗೂ `ನೇಸರು' ಪರವಾಗಿ ಶುಭಾಶಯಗಳು.

## ಶ್ರೀ ಜಯ ಸಿ. ಸುವರ್ಣ ಅವರ 50ನೇ ಹುಟ್ಟು ಹಬ್ಬದ ಸಮಾರಂಭ

ದಿನಾಂಕ 28-06-1996ರಂದು ಶನಿವಾರ ಸಂಜೆ ಚೆಂಬೂರಿನ ಶಿವಸ್ವಾಮಿ ಸಭಾಗೃಹದಲ್ಲಿ ಶ್ರೀ ಜಯ ಸಿ. ಸುವರ್ಣ ಅವರ 50ನೇ ಹುಟ್ಟಿದ ಹಬ್ಬದ ಹಿನ್ನೆಲೆಯಲ್ಲಿ ಸಾರ್ವಜನಿಕ ಸನ್ಮಾನ ಏರ್ಪಡಿಸಲಾಗಿತ್ತು. ಸೋಮಯ್ಯ ಕಾಲೇಜಿನ ಪ್ರಾಂಶುಪಾಲ ಶ್ರೀ ಎಸ್. ಕೆ. ಭವಾನಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪೇಜಾವರ ಸ್ವಾಮಿಗಳಾದ ಪೂಜ್ಯ ವಿಶ್ವೇಶ್ವರ ತೀರ್ಥರು ಉಪಸ್ಥಿತರಿದ್ದು ಆಶೀರ್ವಚನ ನೀಡಿದರು. ಸನ್ಮಾನ ಸಮಿತಿ ಮುಂಬೈ ವಿಶ್ವ ವಿದ್ಯಾಲಯಕ್ಕೆ ಕೊಡ ಮಾಡಿದ 25,000 ರೂಪಾಯಿಗಳ ದತ್ತಿ ನಿಧಿಯನ್ನು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ। ತಾಳ್ತಜೆ ವಸಂತ ಕುಮಾರರು ಸ್ವೀಕರಿಸಿ ದತ್ತಿ ಉಪನ್ಯಾಸದ ವೈಚಿತ್ರ್ಯ ಕುರಿತು ಮಾತನಾಡಿದರು. ಸುವರ್ಣ ಅವರ ಸಾಧನೆಯನ್ನು ಕುರಿತು ಪ್ರಾ. ಸುನೀತಾ ಶೆಟ್ಟಿ, ಶ್ರೀ ಭುಜಂಗ ಶೆಟ್ಟಿ, ಶ್ರೀ ಕೆ. ಕೆ. ಪುತ್ರನ್ ಹಾಗೂ ಶ್ರೀ ಬಾಬು ಶಿವ ಪೂಜಾರಿ ಮಾತನಾಡಿದರು. ಶ್ರೀ ಎಂ. ಬಿ. ಕುಕ್ಯಾನ್ ದತ್ತಿ ನಿಧಿ ಸಮರ್ಪಿಸಿದರು.

**MATRIMONIAL**

Wanted an Engineer or Bank Officer aged 26 to 28 years for a Kannada Smartha brahmin Girl, 5'3.5" employed as Physiotherapist in Sion Hospital. Has done post graduation in Physiotherapist. Age 23½ years. Bhardwaja Gotra, Pushya Nakshtra. Please write with details to Nesaru Box No. 117.

### ಸುಭಾಷಿತಗಳು

ವಿದ್ಯಾ ಪ್ರವಸತೋ ಮಿತ್ರಂ ಭಾರ್ಯಾ ಮಿತ್ರಂ ಗೃಹೇ ಸತಃ |
ಆತುರಸ್ಯ ಭಿಷಗ್ ಮಿತ್ರಂ ದಾನಂ ಮಿತ್ರಂ ಮರಿಷ್ಯತಃ ||
ಪ್ರವಾಸ ಮಾಡುವವನಿಗೆ ವಿದ್ಯೆಯೇ ಮಿತ್ರ.
ಮನೆಯಲ್ಲಿರುವವನಿಗೆ ಹೆಂಡತಿ ಮಿತ್ರಳು. ರೋಗಿಗೆ ವೈದ್ಯನು ಮಿತ್ರ. ಹಾಗೆಯೇ ಸಾಯುವವನಿಗೆ ದಾನವೇ ಮಿತ್ರ.
ವಿದೇಶೇಷು ಧನಂ ವಿದ್ಯಾ ವ್ಯಸನೇಷು ಧನಂ ಮತಿಃ |
ಪರಲೋಕೇ ಧನಂ ಧರ್ಮಃ ಶೀಲಂ ತು ನಿಖಿಲಂ ಧನಮ್ ||
ಪರಸ್ಥಳದಲ್ಲಿ ವಿದ್ಯೆಯೇ ಧನ, ವಿಪತ್ಕಾಲದಲ್ಲಿ ಬುದ್ಧಿಯೇ ಧನ, ಪರಲೋಕದಲ್ಲಿ ಧರ್ಮವೇ ಧನ, ಒಳ್ಳೆಯ ನಡತೆಯಾದರೋ, ಎಲ್ಲೆಡೆಯಲ್ಲಿಯೂ ಅಖಂಡ ಧನ.

Edited, Printed & Published by M.A.N. Prasad on behalf of the Mysore Association, Mumbai- Tel.: 402 46 47
Laser Typset and Printed at Aarati Art Printers, Fort, Bombay-400 001. * Tel.: 266 33 61/266 59 38